ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಎಂ.ಫಿಲ್.ಪದವಿಯ ಸಂಪ್ರಬಂಧ

"ಪ್ರೌಢಶಾಲಾ ಮಕ್ಕಳ ಕನ್ನಡದ ಬಳಕೆಯಲ್ಲಿ ಕಾಗುಣಿತ ದೋಷಗಳು"

ಸಂಶೋಧನಾ ವಿದ್ಯಾರ್ಥಿ

ಸಿದ್ಧಲಿಂಗಪ್ಪ. ಎಸ್. ದೇಶ್‌ಮುಖ್

ಮಾರ್ಗದರ್ಶಕರು

ಡಾ. ಕೃಷ್ಣಪರಮೇಶ್ವರ ಭಟ್ಟ

ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ

ಬೆಂಗಳೂರು

2007-08

406

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಎಂ.ಫಿಲ್.ಪದವಿಯ ಸಂಪ್ರಬಂಧ

''ಪ್ರೌಢಶಾಲಾ ಮಕ್ಕಳ ಕನ್ನಡದ ಬಳಕೆಯಲ್ಲಿ ಕಾಗುಣಿತ ದೋಷಗಳು''

ಸಂಶೋಧನಾ ವಿದ್ಯಾರ್ಥಿ

ಸಿದ್ಧಲಿಂಗಪ್ಪ. ಎಸ್. ದೇಶ್‌ಮುಖ್

ಮಾರ್ಗದರ್ಶಕರು

ಡಾ. ಕೃಷ್ಣಪರಮೇಶ್ವರ ಭಟ್ಟ

ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ

ಬೆಂಗಳೂರು

2007-08

ಅಭ್ಯರ್ಥಿಯ ಪ್ರಮಾಣ ಪತ್ರ

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರಿನ ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ 2007-2008ನೇ ಸಾಲಿನ ಎಂ.ಫಿಲ್. ಪದವಿಗಾಗಿ **''ಪ್ರೌಢಶಾಲಾ ಮಕ್ಕಳ ಕನ್ನಡದ ಬಳಕೆಯಲ್ಲಿ ಕಾಗುಣಿತ ದೋಷಗಳು''** ಎಂಬ ಸಂಪ್ರಬಂಧವನ್ನು ಡಾ. ಕೃಷ್ಣಪರಮೇಶ್ವರ ಭಟ್ಟ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಸಲ್ಲಿಸುತ್ತಿದ್ದೇನೆ.

ಈ ಸಂಪ್ರಬಂಧ ನನ್ನ ಸ್ವಂತ ಬರವಣಿಗೆ ಆಗಿದ್ದು ಇದರ ಯಾವುದೇ ಭಾಗವನ್ನು ಈವರೆಗೆ ಬೇರೆಲ್ಲೂ ಪ್ರಕಟಪಡಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ಸಹಿ

ಸ್ಥಳ : ಬೆಂಗಳೂರು

ದಿನಾಂಕ : 03-11-2008

(ಸಿದ್ಧಲಿಂಗಪ್ಪ.ಎಸ್.ದೇಶ್‌ಮುಖ್)

ಮಾರ್ಗದರ್ಶಕರ ಪ್ರಮಾಣ ಪತ್ರ

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರಿನ ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ 2007-2008ನೇ ಸಾಲಿನ ಎಂ.ಫಿಲ್. ಪದವಿಗಾಗಿ **''ಪ್ರೌಢಶಾಲಾ ಮಕ್ಕಳ ಕನ್ನಡದ ಬಳಕೆಯಲ್ಲಿ ಕಾಗುಣಿತ ದೋಷಗಳು''** ಎಂಬ ಸಂಪ್ರಬಂಧವನ್ನು ಸಿದ್ಧಲಿಂಗಪ್ಪ.ಎಸ್.ದೇಶ್‌ಮುಖ್ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ.

ಈ ಸಂಪ್ರಬಂಧ ಈ ವಿದ್ಯಾರ್ಥಿಯ ಸ್ವಂತ ಬರವಣಿಗೆ ಆಗಿದ್ದು ಇದರ ಯಾವುದೇ ಭಾಗವನ್ನು ಈವರೆಗೆ ಬೇರೆಲ್ಲೂ ಪ್ರಕಟಪಡಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ಸಹಿ

ಸ್ಥಳ : ಬೆಂಗಳೂರು
ದಿನಾಂಕ : 03-11-2008

(ಡಾ. ಕೃಷ್ಣಪರಮೇಶ್ವರ ಭಟ್ಟ)

ಅನುಕ್ರಮಣಿಕೆ

ಅಧ್ಯಾಯ - ಒಂದು

ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

ಅಧ್ಯಾಯ-ಒಂದು
ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

೧. ಪೀಠಿಕೆ :

ಸಂವಹನಕ್ಕಿರುವ ಅತ್ಯಂತ ಸರಳ ಹಾಗು ಆಕರ್ಷಕವಾದ ಮಾಧ್ಯಮ ಭಾಷೆ. ಇದು 'ನಿಂತ ನೀರಲ್ಲ, ನಿರಂತರವಾಗಿ ಹರಿಯುವ ಪ್ರವಾಹ' ಇದರ ಕಲಿಕೆಗೆ ಅನುಕರಣೆ ಎಷ್ಟು ಅವಶ್ಯಕವೋ ಅಷ್ಟೇ ಭಾಷಾ ಕೌಶಲಗಳಾದ ಆಲಿಸುವಿಕೆ, ಮಾತನಾಡುವುದು, ಓದುವುದು ಮತ್ತು ಬರೆಯುವುದು ಭಾಷೆಯ ಸಮರ್ಥ ಕಲಿಕೆಗೆ ನೆರವಾಗುವುವು. ಭಾಷಾ ಕಲಿಕೆಯ ಅನುಕ್ರಮದ ಹಂತವನ್ನು ಡಾ. ಎಂ. ಚಿದಾನಂದಮೂರ್ತಿಯವರು '' ಭಾಷೆಯನ್ನು ಮೊದಲು ಅರಿಯುತ್ತೇವೆ. ನಂತರ ಒರೆಯುತ್ತೇವೆ, ನಂತರ ಬರೆಯುತ್ತೇವೆ' ಎನ್ನುತ್ತಾರೆ. ಅಂದರೆ ಭಾಷಾ ಕಲಿಕೆಗೆ ಬರವಣಿಗೆ ಹೆಚ್ಚು ಪುಷ್ಟಿಯನ್ನು ತಂದುಕೊಡುತ್ತದೆ ಎನ್ನಬಹುದು.

ಹೀಗೆ ಒಂದು ಭಾಷೆಯ ಸ್ಪಷ್ಟ ಉಚ್ಚಾರಣೆ ಮತ್ತು ಬರಹದ ಮೂಲಕ ಅದರ ಬಳಕೆ ಉತ್ತಮಗೊಳ್ಳಬಹುದು. ಆದರೆ ಅಂತಹ ಬರಹಗಳಲ್ಲಿ ಅನೇಕ ಕಾಗುಣಿತ ದೋಷಗಳು ಕಂಡುಬರುತ್ತವೆ. ಅವುಗಳ ಲಿಪಿ - ಚಿಹ್ನೆಗಳನ್ನು ಸರಿಯಾಗಿ ಬಳಸಬೇಕಾಗುತ್ತದೆ. ಇವು ಅಕ್ಷರಗಳಿಂದ ಕೂಡಿರುತ್ತವೆ. ಅಕ್ಷರ ಎನ್ನುವುದು ವರ್ಣಲಾಲಿತ್ಯದ ಅತಿ ಕನಿಷ್ಠತಮ ಘಟಕ. ಹಾಗೆಯೇ ಇದು ಸ್ಥಾನ ಮತ್ತು ಕರಣಗಳ ಫಲಶ್ರುತಿಯಾಗಿದೆ. ಹೀಗೆ ವರ್ಣ, ಪದ, ವಾಕ್ಯಗಳಿಂದ ಭಾಷೆಯ ಲಿಪಿ ಆರಂಭವಾಗುತ್ತದೆ. ಯಾವುದೇ ಭಾಷಾಲಿಪಿಯನ್ನು ಹೊಂದಿರುವ ಪ್ರಪಂಚದ ಪ್ರತಿಯೊಂದು ಭಾಷೆಯಲ್ಲಿಯೂ ಕಾಗುಣಿತ ದೋಷಗಳುಂಟಾಗುವುದು ಸಾಮಾನ್ಯವಾಗಿ ಕಂಡುಬರುವ ಸಂಗತಿ. ಅದರಂತೆಯೇ ಕನ್ನಡದ ಬಳಕೆಯಲ್ಲೂ ಕೂಡ ಕಾಗುಣಿತ ದೋಷಗಳುಂಟಾಗುತ್ತಿವೆ. ಏಕೆಂದರೆ ಕನ್ನಡದ ಭಾಷಾ ಬಳಕೆಯಲ್ಲಿ ಶುದ್ಧವಾಗಿ ಉಚ್ಚರಿಸುವ ಹಾಗು ಬರೆಯುವ ಸಾಮರ್ಥ್ಯ ಹೊಂದಿರುವುದು ಅಪೇಕ್ಷಣೀಯ. ಉದಾ: 'ಫಲ'ಎಂಬುವುದರ ಬದಲಾಗಿ 'ಪಲ'ಎನ್ನುವುದು, 'ಗೃಹ' ಎನ್ನುವಲ್ಲಿ 'ಗ್ರಹ', ಪ್ರದಾನಕ್ಕೆ ಬದಲು 'ಪ್ರಧಾನ' ಎಂದು ಬಳಸುತ್ತಿದ್ದರೆ ಎಂಥೆಂಥ ತಪ್ಪುಗಳಾಗುತ್ತವೆ ಎಂಬುದನ್ನು ವಿವರಿಸಬೇಕಾಗಿಲ್ಲ.

ಜಿ.ಪಿ. ರಾಜರತ್ನಂ ಒಮ್ಮೆ ಗುರು-ಶಿಷ್ಯರ ಸಂಬಂಧ ಕುರಿತು ಟ್ಯಾಂಕ್ (Tank) ನಲ್ಲಿ ನೀರಿದ್ದರೆ ನಲ್ಲಿಯಲ್ಲಿ ನೀರು ಬರುತ್ತದೆ. ಟ್ಯಾಂಕ್ (Tank) ಏ ಖಾಲಿಯಾದಾಗ! ಎಂಥ ಕಟು ಸತ್ಯ! ಇಂತಹ ಕೊರತೆಗಳಿಗೆ ಮತ್ತು ತಪ್ಪುಗಳಿಗೆ ಅವಕಾಶ ಕೊಡದ ರೀತಿಯಲ್ಲಿ ಮಾರ್ಗದರ್ಶನ ಕೊಡಬೇಕಾಗಿದೆ. ಏಕೆಂದರೆ ಇಂದು ಜೀವನದ ಪ್ರತಿಯೊಂದು ಸನ್ನಿವೇಶವನ್ನೂ ಬರಹ ಆಕ್ರಮಿಸಿಕೊಂಡಿದೆ. ಹಾಗಾಗಿ ಕನ್ನಡದ ಬಳಕೆಯಲ್ಲಿ ಅನೇಕ ಲಿಪಿ-ಚಿಹ್ನೆಗಳಿಗೆ ಸಂಬಂಧಿಸಿದ ದೋಷಗಳು ಕಂಡುಬರುತ್ತವೆ. ಅದಕ್ಕಾಗಿ ಗ್ರಾಮೀಣ ಮತ್ತು ನಗರ ಪ್ರದೇಶದ ಪ್ರೌಢಶಾಲಾ ಮಕ್ಕಳು ಮಾಡುವ ಕಾಗುಣಿತ ದೋಷಗಳನ್ನು ಈ ಸಂಪ್ರಬಂಧದಲ್ಲಿ ಸಮೀಕ್ಷೆಯನ್ನು ಕೈಗೊಳ್ಳುವುದರ ಮೂಲಕ ವಿಶ್ಲೇಷಿಸಲಾಗಿದೆ.

೨. ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ :

ಕನ್ನಡ ಭಾಷೆ ಇಂದು ಇಂಗ್ಲೀಷ್ ಮತ್ತು ಇತರೇ ಭಾಷೆಗಳ ಪ್ರಭಾವದಿಂದ ಸಂಧಿಕಾಲವನ್ನು ಎದುರಿಸುತ್ತಿದೆ. ಕರ್ನಾಟಕದಲ್ಲಿ ವಾಸಿಸುವ ಮೇಲ್ವರ್ಗದವರ ಮಕ್ಕಳು ಈಗಾಗಲೇ ಕನ್ನಡದ ಬಳಕೆಯನ್ನು ನಿರ್ಲಕ್ಷಿಸುತ್ತಿದ್ದಾರೆ ಎನ್ನಲಾಗಿದೆ. ಏಕೆಂದರೆ ಬರಹದ ಮೂಲಕ ಎಂತಹ ಪ್ರಯೋಜನಗಳನ್ನೆಲ್ಲ ಪಡೆಯಲು ಸಾಧ್ಯವೋ ಅವನ್ನೆಲ್ಲ ಇಂಗ್ಲೀಷ್ ಬರಹದ ಮೂಲಕವೇನೇ ಅವರು ಈಗ ಪಡೆಯಬಲ್ಲವರಾಗಿದ್ದಾರೆ. ಉಚ್ಚಾರಣೆಯಲ್ಲಿಯೂ ನಗರದ ಮಕ್ಕಳು ಇತರೇ ಭಾಷೆಯ ಕಲಿಕೆಯಲ್ಲಿಯೇ ಹೆಚ್ಚು ಆಸಕ್ತಿಯನ್ನು ತೋರಿಸುತ್ತಿದ್ದಾರೆಂದು ಊಹಿಸಲಾಗಿದೆ.

ನಮ್ಮ ಸಮಾಜದ ಉಳಿದ ಮಕ್ಕಳು ಇದೇ ದಾರಿಯನ್ನು ಹಿಡಿದಲ್ಲಿ ಕ್ರಮೇಣ ಕನ್ನಡ ಭಾಷೆಗೆ ಸಂಸ್ಕೃತ ಭಾಷೆಯ ಅವಸ್ಥೆಯೇ ಬಂದೀತು. 'ಇಂಗಿ ಹೋಗುತ್ತಿದೆ ಇಂಗ್ಲೀಷಿನ ಮರುಭೂಮಿಯಲ್ಲಿ ನಿನ್ನ ಮಕ್ಕಳ ಬುದ್ಧಿ, ಪ್ರತಿಭೆ, ಶಕ್ತಿ ಎಲ್ಲವು' ಎನ್ನುತ್ತಾರೆ. ರಾಷ್ಟ್ರಕವಿ ಕುವೆಂಪುರವರು. ಆದರೂ ಈಗ ಶಾಲೆಗಳಲ್ಲಿ ಮೊದಲನೆಯ ತರಗತಿಯಿಂದಲೇನೇ ಇಂಗ್ಲೀಷ್ ಕಲಿಸಬೇಕೆಂಬ ಬೇಡಿಕೆ ಮುಂದೆ ಬಂದಿದೆ. ಈ ಹಿನ್ನೆಲೆಯಲ್ಲಿ ಕನ್ನಡದ ಬಳಕೆಯಲ್ಲಿ ಕಾಗುಣಿತ ದೋಷಗಳ ಪ್ರಮಾಣ ಹೆಚ್ಚಾಗುವುದು ನಿಸ್ಸಂದೇಹವಾಗುತ್ತದೆ.

ಹಾಗೆಂದು ಮೇಲಿನ ಬೇಡಿಕೆಯನ್ನು ಪೂರೈಸದಿರುವುದೂ ಸರಿಯಲ್ಲ. ಕನ್ನಡ ಭಾಷೆ ಸಂಸ್ಕೃತದ ದಾರಿಯನ್ನು ಹಿಡಿಯದ ಹಾಗಾಗಬೇಕಾದಲ್ಲಿ ಯಾವುದೇ ರೀತಿಯ ಮಡಿವಂತಿಕೆಯನ್ನು ಹೊರಿಸದೇ ಕನ್ನಡ ಭಾಷೆಯ ಮೇಲೆ ಜೀವಂತಿಕೆಯನ್ನು ತುಂಬುವ ಮೂಲಕ ಅದು ಎಲ್ಲರಿಗೂ ಬೇಕಾಗುವ ಹಾಗೆ ಮಾಡಬಹುದು. ಹಾಗಾಗಿ ಕನ್ನಡ ಬರಹ ವಿದ್ವಾಂಸರ ಸೊತ್ತಾಗಿ ಮಾತ್ರ ಉಳಿಯದೆ ಎಲ್ಲರ ಅವಶ್ಯಕತೆಗಳನ್ನು ಪೂರೈಸುವ ಸಾಧನವಾಗಲು ಪ್ರೋತ್ಸಾಹಿಸಬೇಕಾಗಿದೆ.

ಸರ್ವೇಸಾಮಾನ್ಯವಾಗಿ ಕನ್ನಡ ಬಳಕೆಯ ಲಿಪಿ-ಚಿಹ್ನೆಗಳಲ್ಲಿ ಮತ್ತು ಉಚ್ಚಾರಣೆಗಳಲ್ಲಿ ಎಲ್ಲರೂ ಒಂದಲ್ಲ ಒಂದು ರೀತಿಯ ದೋಷವನ್ನು ಮಾಡುವುದು ಕಂಡುಬರುತ್ತದೆ. ಏಕೆಂದರೆ ಅದು ಅನೇಕ ಸಂಗತಿಗಳನ್ನು ಅವಲಂಬಿಸಿರುತ್ತದೆ. ಹಾಗೆ ಎಲ್ಲಾ ಭಾಷೆಗಳಲ್ಲಿ ಕಾಗುಣಿತ ದೋಷಗಳಾಗುವುದು ಸಾಮಾನ್ಯವಾದ ಸಂಗತಿಯಾಗಿದೆ.

ಪ್ರಸ್ತುತ ಈ ಸಂಪ್ರಬಂಧದಲ್ಲಿ ಪ್ರೌಢಶಾಲಾ ಮಕ್ಕಳು ಕನ್ನಡ ಬರಹದಲ್ಲಿ ಮಾಡುವ ಲಿಪಿ-ಚಿಹ್ನೆಗಳಿಗೆ ಸಂಬಂಧಿಸಿದ ದೋಷಗಳನ್ನೆಲ್ಲ ಕಾಗುಣಿತ ದೋಷಗಳೆಂದು ಇಟ್ಟುಕೊಳ್ಳಲಾಗಿದೆ. ಏಕೆಂದರೆ ಕನ್ನಡದಲ್ಲಿ ಕಾಗುಣಿತದ ರೇಖಾವಿನ್ಯಾಸಗಳನ್ನು ಸರಿಯಾಗಿ ಅಳವಡಿಸದೆ ಬರೆಯುವುದು, ತಲೆಗಟ್ಟು, ಏತ್ವ, ದೀರ್ಘ, ಕೊಂಬು, ಐತ್ವ, ಅರ್ಕಾವತ್ತು, ಅರ್ಧಾಕ್ಷರ ಚಿಹ್ನೆ ಮುಂತಾದವುಗಳನ್ನು ಸರಿಯಾಗಿ ಸೇರಿಸದೆ ಬರೆಯುವುದು, ಅಲ್ಪಪ್ರಾಣ -ಮಹಾಪ್ರಾಣ, ದೀರ್ಘಾಕ್ಷರ, ಸಂಯುಕ್ತಾಕ್ಷರಗಳನ್ನು ಬರೆಯದಿರುವುದು. ಶ, ಷ, ಸ, 'ಅ'ಕಾರಾದಿ-'ಸ್ವ'ರಾದಿ, ಳ, ಲ, ವ, ಣ, ಏ ಇತ್ಯಾದಿಗಳನ್ನು ಬರೆಯುವಾಗ ಆಗುವ ದೋಷಗಳಲ್ಲಿನ ಪ್ರಮಾಣ ಕಂಡುಕೊಳ್ಳಲು ವಿವಿಧ ಶಾಲೆಗಳು ತರಗತಿ, ಲಿಂಗ, ಜಾತಿ ಸಾಮಾಜಿಕ ವಾತಾವರಣ, ಆರ್ಥಿಕ ಅನುಕೂಲಗಳು, ಕೌಟುಂಬಿಕ ವ್ಯವಹಾರಗಳು ಗ್ರಾಮೀಣ ಮತ್ತು ನಗರಪ್ರದೇಶದ ಪ್ರೌಢಶಾಲಾ ಮಕ್ಕಳ ಸ್ವವಿವರಗಳ ಹಿನ್ನೆಲೆಯಲ್ಲಿ ಸಮೀಕ್ಷೆಯನ್ನು ಕೈಗೊಂಡು ಅಧ್ಯಯನ ಮಾಡಲಾಗಿದೆ.

ಕಾಗುಣಿತ ದೋಷಗಳಿಗೆ ಕಾರಣಗಳು

ಪ್ರಸ್ತುತವಾಗಿ ಕನ್ನಡದ ಬಳಕೆಯಲ್ಲಿ ಕಾಗುಣಿತ ದೋಷಗಳುಂಟಾಗಲು ಕಾರಣಗಳೆಂದರೆ

- ಪ್ರಾಥಮಿಕ ಶಾಲಾ ಹಂತದಲ್ಲಿ ಕನ್ನಡದ ಕಲಿಕೆ ಸಮರ್ಪಕವಾಗಿ ಮಾಡದೇ ಇರಬಹುದು.
- ಪ್ರಾಥಮಿಕ ಕಲಿಕಾ ಹಂತದಲ್ಲಿಯೇ ಇತರೇ ಭಾಷಾ ಕಲಿಕೆಯ ವ್ಯಾಮೋಹ ಇರಬಹುದು.
- ಮನೆಯಲ್ಲಿ ಪೋಷಕರು ಕನ್ನಡ ಕಲಿಕೆಯನ್ನು ಪ್ರೋತ್ಸಾಹಿಸದೇ ಇರಬಹುದು.
- ಮನೆಗಳಲ್ಲಿ ಕನ್ನಡಕ್ಕೆ ಬದಲಾಗಿ ಇತರೇ ಭಾಷಾ ವೃತ್ತಪತ್ರಿಕೆಗಳನ್ನು ಬಳಸುವುದಾಗಿರಬಹುದು.

ಹೀಗೆ ಇತರೇ ಅನೇಕ ಕಾರಣಗಳ ಹಿನ್ನೆಲೆಯಲ್ಲಿ ಮಕ್ಕಳ ಲಿಪಿ ಮತ್ತು ಉಚ್ಚಾರಣಾ ರೂಪದಲ್ಲಿ ವ್ಯತ್ಯಾಸಗಳು ಹೆಚ್ಚಾಗಬಹುದಾಗಿದೆ. ಆದ್ದರಿಂದ ಲಿಪರೂಪದಲ್ಲಿ ಕನ್ನಡವನ್ನು ಬಳಸುವಾಗ ಅತಿ ಹೆಚ್ಚು ದೋಷ ಪ್ರಮಾಣಗಳಾಗುತ್ತವೆ. ಇದಕ್ಕೆ ಇನ್ನೂ ಅನೇಕ ಕಾರಣಗಳನ್ನು ಸೂಚಿಸಬಹುದಾಗಿದೆ.

ಕಾಗುಣಿತ ಜ್ಞಾನ ಇಲ್ಲದೆ ಕಾಗುಣಿತದ ಬಗ್ಗೆ ತಿಳುವಳಿಕೆ ಹಾಗೂ ತರಬೇತಿ ಇಲ್ಲದೆ ಪರಭಾಷೆಯ ಬರವಣಿಗೆಯ ಪ್ರಭಾವದಿಂದ ಮಾನಸಿಕ ಮತ್ತು ಸ್ನಾಯು ಹೊಂದಾಣಿಕೆಯ ಕೊರತೆಯಿಂದ ಕಾಗುಣಿತ ರೇಖಾ ವಿನ್ಯಾಸಗಳನ್ನು ಬರೆಯುವ ಅಭ್ಯಾಸವಿಲ್ಲದೆ ಅಜಾಗರೂಕತೆಯಿಂದ, ಬೇಜವಾಬ್ದಾರಿಯಿಂದ, ಅವಸರದಲ್ಲಿ ಬರೆಯುವುದರಿಂದ ಕುಳಿತು ಬರೆಯಲು ಸಾಧ್ಯವಾಗದಿರುವಾಗ, ಅಸಮರ್ಪಕ ಆಸನ ವ್ಯವಸ್ಥೆಗಳಿಂದ ಮತ್ತು ಪ್ರಾದೇಶಿಕ ವಾತಾವರಣದಿಂದಾಗಿ ಕಾಗುಣಿತ ದೋಷಗಳಾಗುತ್ತವೆ.

೪. ಕಾಗುಣಿತ ದೋಷಗಳ ಬಗ್ಗೆ ವಿದ್ವಾಂಸರ ಅಭಿಪ್ರಾಯ

ಕನ್ನಡದ ಬಳಕೆಯಲ್ಲಿ ಕಾಗುಣಿತ ದೋಷಗಳು ಕಂಡುಬರುವುದಕ್ಕೆ ಕಾರಣಗಳು ಮತ್ತು ಅವುಗಳಿಂದಾಗುವ ಪರಿಣಾಮಗಳನ್ನು ಕುರಿತು ವಿದ್ವಾಂಸರು ವಿವಿಧ ರೀತಿಯ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಇದರಲ್ಲಿ ಭಾಷಾ ವಿದ್ವಾಂಸರಾದ ಡಿ.ಎನ್. ಶಂಕರಭಟ್‌ರವರು ತಮ್ಮ 'ಕನ್ನಡ ಬರಹವನ್ನು ಸರಿಪಡಿಸೋಣ' ಎಂಬ ಕೃತಿಯಲ್ಲಿ ಹೇಳಿರುವಂತೆ, ಸಂಸ್ಕೃತದ ಪದಗಳನ್ನು ಸಂಸ್ಕೃತದಲ್ಲಿರುವ ಹಾಗೆಯೇ ಬರೆಯುವ ಕೆಲಸ ಮೇಲ್ವರ್ಗದ ಮಕ್ಕಳಿಗಿಂತಲೂ ಹೆಚ್ಚಾಗಿ ಕೆಳವರ್ಗದ ಮಕ್ಕಳೇ ತಪ್ಪುಗಳನ್ನು ಮಾಡುತ್ತಾರೆ. ಈ ರೀತಿ ಉಚ್ಚಾರಣೆಯಿಲ್ಲದ ಹಲವು ವ್ಯತ್ಯಾಸಗಳನ್ನು ಬರಹದಲ್ಲಿ ತೋರಿಸುವ ಕಾರಣವಲ್ಲದೆ ಕನ್ನಡದ ಮಟ್ಟಿಗೆ ಅವಶ್ಯವಿಲ್ಲದಂತಹ ಹಲವಾರು ಹೆಚ್ಚಿನ ಅಕ್ಷರಗಳಾದ ಶ, ಷ, ಮಹಾಪ್ರಾಣಾಕ್ಷರಗಳು, ಅನುಸ್ವರ, ವಿಸರ್ಗ ಮುಂತಾದ ಅಕ್ಷರಗಳನ್ನು ಬಳಸುತ್ತಿರುವುದೇ ಕಾಗುಣಿತ ದೋಷಕ್ಕೆ ಎಡೆಮಾಡಿದೆ. ನಿಜಕ್ಕೂ ಕನ್ನಡದವೇ ಆದ ಪದಗಳನ್ನು ಬರೆಯುವುದಕ್ಕೆ ಒಟ್ಟು ಮೂವತ್ತಮೂರು ಅಕ್ಷರಗಳು ಸಾಕು ಎಂದು ಅಭಿಪ್ರಾಯ ಪಟ್ಟಿದ್ದಾರೆ. ಹಾಗೂ ಕನ್ನಡದಲ್ಲಿ ಬಳಕೆಯಲ್ಲಿಲ್ಲದ ದೇಶೀ ಸ್ವರಗಳನ್ನು ಬಳಸದೇ ಇರುವುದು ಬಳಕೆಗೆ ಬೇಕಾದ ಅಕ್ಷರಗಳನ್ನು ಮಾತ್ರ ತೆಗೆದುಕೊಳ್ಳಬೇಕು ಎನ್ನುತ್ತಾರೆ. ಅಂದರೆ ಕನ್ನಡ ಲಿಪಿ ಚಿಹ್ನೆಗಳಲ್ಲಾಗುವ ದೋಷಗಳಲ್ಲಿ ಸ್ವೀಕೃತ ವರ್ಣಗಳೇ ಕಾಗುಣಿತ ದೋಷಕ್ಕೆ ಕಾರಣ ಅದಕ್ಕಾಗಿ ದೇಶೀ ವರ್ಣಗಳನ್ನೇ ಮಾತ್ರ ಬಳಸಿಕೊಳ್ಳಬೇಕು ಎಂಬ ನಿಲುವನ್ನು ತಾಳುತ್ತಾರೆ.

ಇವರ ವಾದಕ್ಕೆ ವಿರೋಧವನ್ನು ವ್ಯಕ್ತಪಡಿಸಿದ ಭಾಷಾತಜ್ಞರುಗಳಲ್ಲಿ ಪ್ರಮುಖರಾದ ಎಂ. ಚಿದಾನಂದಮೂರ್ತಿ ಮತ್ತು ಜಿ. ವೆಂಕಟಸುಬ್ಬಯ್ಯ ಮುಂತಾದ ವಿದ್ವಾಂಸರು ಡಿ.ಎನ್. ಶಂಕರ್‌ಭಟ್ಟರ ವಾದವನ್ನು ವಿರೋಧಿಸುತ್ತಾ ತಮ್ಮದೇ ಆದ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಇವರ ಪ್ರಕಾರ ಕನ್ನಡದಲ್ಲಿರುವ ಸ್ವೀಕೃತ ಪದಗಳನ್ನು ಮತ್ತು ಲಿಪಿ-ಚಿಹ್ನೆಗಳನ್ನು ತೆಗೆದು ಹಾಕಿದರೆ ಬರವಣಿಗೆ ಅಸಂಬದ್ಧವಾಗುವುದಲ್ಲದೆ ಕನ್ನಡ ಸಂಸ್ಕೃತಿಗೆ ಧಕ್ಕೆಯಾಗುತ್ತದೆ ಮತ್ತು ಕನ್ನಡದಲ್ಲಿ ಈ ಹಿಂದೆ ಗತಕಾಲದಿಂದಲೂ ಬಳಸಿಕೊಂಡು ಬಂದ ಸಂಸ್ಕೃತ ಮತ್ತು ಇತರೆ ಸ್ವೀಕೃತ ಪದಗಳನ್ನು ತೆಗೆದು ಹಾಕುವುದು ಕಷ್ಟವಾದ ಕೆಲಸವಾಗಿದೆ ಎಂದು ವಿರೋಧವನ್ನು ವ್ಯಕ್ತಪಡಿಸುತ್ತಾರೆ.

ಈ ವಿದ್ವಾಂಸರ ವಾದಗಳ ಹಿನ್ನೆಲೆಯಲ್ಲಿ ಕನ್ನಡದಲ್ಲಿನ ಕಾಗುಣಿತ ದೋಷಗಳನ್ನು ಕಂಡುಕೊಳ್ಳಲು ಈ ಸಂಪ್ರಬಂಧದಲ್ಲಿ ಕೇವಲ ಪ್ರೌಢಶಾಲಾ ಮಕ್ಕಳನ್ನು ಮಾತ್ರ ಆಯ್ದುಕೊಂಡು ಬೆಂಗಳೂರು ನಗರ, ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿಗೆ ಸಂಬಂಧಿಸಿದಂತೆ, ರಾಮನಗರ, ಚನ್ನಪಟ್ಟಣ, ಕನಕಪುರ ಮತ್ತು ನೆಲಮಂಗಲ ತಾಲ್ಲೂಕಿಗೆ ಸೇರಿದ ಒಟ್ಟು ಹದಿನಾರು ಗ್ರಾಮೀಣ ಮತ್ತು ನಗರ ಶಾಲೆಗಳ ಸಂದರ್ಶನದಲ್ಲಿ ಕನ್ನಡದ ಬಳಕೆಯಲ್ಲಿನ ಕಾಗುಣಿತ ದೋಷಗಳನ್ನು ಹ್ರಸ್ವಸ್ವರ-ದೀರ್ಘಸ್ವರ ದೋಷ, ಶ, ಷ, ಸ, ಗಳ ದೋಷ, 'ಅ'ಕಾರಾದಿ-'ಸ್ವ'ರಾದಿ ದೋಷ, ಅಲ್ಪಪ್ರಾಣ-ಮಹಾಪ್ರಾಣ ದೋಷ, ಒತ್ತಕ್ಷರ ಮತ್ತು ಇತರೇ ದೋಷಗಳನ್ನು ಕಂಡುಕೊಳ್ಳಲು ಶಾಲಾವಾರು ಸಮೀಕ್ಷೆಯನ್ನು ನಡೆಸಿ ಇವುಗಳಲ್ಲಿ ಕಂಡು ಬರುವ ದೋಷ ಪ್ರಮಾಣಗಳನ್ನು ವಿದ್ಯಾರ್ಥಿಗಳ ಸ್ವ-ವಿವರದ ಹಿನ್ನೆಲೆಯಲ್ಲಿ ಸಮೀಕ್ಷೆ ಕೈಗೊಂಡು ಕಾಗುಣಿತ ದೋಷ ಪ್ರಮಾಣವನ್ನು ಈ ಸಂಪ್ರಬಂಧದ ಮೂಲಕ ವಿಶ್ಲೇಷಿಸಲಾಗಿದೆ.

೫ ಈ ಅಧ್ಯಯನದ ಉದ್ದೇಶ :

ಪ್ರೌಢಶಾಲಾ ಮಕ್ಕಳನ್ನು ಮಾತ್ರ ಸಂದರ್ಶಿಸಿ ಅವರಲ್ಲಿ ಕಾಗುಣಿತ ದೋಷ ಪ್ರಮಾಣವನ್ನು ಶಬ್ಧಗಳು, ವಾಕ್ಯಗಳ ಉಕ್ತಲೇಖನ ಮತ್ತು ಸ್ವತಃ ಒಂದು ಆಯ್ದ ವಿಷಯದ ಮೇಲೆ ಲಘುಟಿಪ್ಪಣಿಯನ್ನು ಕೊಟ್ಟು ಕನ್ನಡದ ಲಿಪಿ-ಚಿಹ್ನೆಗಳಲ್ಲಿ ಕಂಡುಬರುವ ಕಾಗುಣಿತ ದೋಷಗಳನ್ನು ಹ್ರಸ್ವಸ್ವರ-ದೀರ್ಘಸ್ವರ, ಶ, ಷ, ಸ, 'ಅ'ಕಾರಾದಿ-'ಸ್ವ'ರಾದಿ, 'ಅಲ್ಪಪ್ರಾಣ-ಮಹಾಪ್ರಾಣ, ಒತ್ತಕ್ಷರ ಮತ್ತು ಇತರೇ ಅಂಶಗಳಲ್ಲಿನ ದೋಷ ಪ್ರಮಾಣಗಳನ್ನು ಕಂಡುಕೊಳ್ಳುವುದರ ಮೂಲಕ ಕನ್ನಡದ ಬಳಕೆಯಲ್ಲಿ ವಿದ್ಯಾರ್ಥಿಗಳ

ಸ್ವ-ವಿವರವನ್ನವಲಂಬಿಸಿ, ಯಾರು, ಯಾವ-ಯಾವ ಪ್ರಮಾಣದಲ್ಲಿ ಮತ್ತು ಯಾವ ದೋಷಗಳನ್ನು ಅತಿಹೆಚ್ಚು ಮಾಡುವರೆಂದು ಸಮೀಕ್ಷಾ ವರದಿಯ ಮೂಲಕ ಕಂಡುಕೊಂಡು ವಿದ್ವಾಂಸರು ಕೊಟ್ಟಿರುವ ಪರ ಮತ್ತು ವಿರೋಧಗಳ ವಾದವನ್ನು ವಿವೇಚಿಸಲಾಗುವುದು.

ಇಲ್ಲಿ ನಗರ ಮತ್ತು ಗ್ರಾಮೀಣ ಮಕ್ಕಳ ಲಿಂಗವನ್ನಾಧರಿಸಿ ಗಂಡು ಮತ್ತು ಹೆಣ್ಣು, ಶಾಲಾ ಮಾಧ್ಯಮವನ್ನು ಆಧರಿಸಿ ಕನ್ನಡ ಮತ್ತು ಆಂಗ್ಲಮಾಧ್ಯಮವೆಂದು, ಮಾಧ್ಯಮಿಕ ವಿದ್ಯಾರ್ಥಿಗಳನ್ನು ಎಂಟನೇ, ಒಂಬತ್ತನೇ ಮತ್ತು ಹತ್ತನೇ ಎಂದು ತರಗತಿವಾರು, ಸಾಮಾಜಿಕ ವರ್ಗದ ಹಿನ್ನಲೆಯನ್ನು ಬ್ರಾಹ್ಮಣ, ಲಿಂಗಾಯಿತ/ಒಕ್ಕಲಿಗ ಮತ್ತು ಇತರೇ ಎಂದು ಮೂರು ಬಗೆಯಾಗಿ, ಮಾತೃಭಾಷೆಗೆ ಸಂಬಂಧಿಸಿದಂತೆ ಕನ್ನಡ ಮತ್ತು ಇತರೇ (ತಮಿಳು, ತುಳು, ಉರ್ದು, ತೆಲುಗು ಇತ್ಯಾದಿ) ಎಂದು ಆರ್ಥಿಕ ಅನುಕೂಲಗಳನ್ನು ಇಲ್ಲಿ ಸ್ಥೂಲವಾಗಿ ಕಾರು (E1), ದ್ವಿಚಕ್ರವಾಹನ (E2)ಮತ್ತು ಇತರೇ (E3)ಎಂದು ಸಂಕೇತಿಸುವುದರ ಮೂಲಕ ವಿಭಾಗಿಸಿಕೊಂಡು ಅವರ ಕಾಗುಣಿತ ದೋಷ ಪ್ರಮಾಣವನ್ನು ಸೂಚಿಸಲಾಗುವುದು.

ಇವುಗಳ ಹಿನ್ನೆಲೆಯಲ್ಲಿ ಪ್ರೌಢಶಾಲಾ ಮಕ್ಕಳ ಕನ್ನಡದ ಬಳಕೆಯಲ್ಲಿ ಕಾಗುಣಿತ ದೋಷಗಳುಂಟಾಗಲು ಕಾರಣವೇನು ? ಯಾವ ಪ್ರಮಾಣದಲ್ಲಿ ತಪ್ಪುಗಳು ಕಂಡುಬರುತ್ತವೆ ಎಂಬುವುದನ್ನು ಈ ಸಂಪ್ರಬಂಧದ ಮೂಲಕ ತಕ್ಕಮಟ್ಟಿಗೆ ವಿವರಣೆ ನೀಡಲಾಗುವುದು.

ಅಧ್ಯಾಯ - ಎರಡು

ಅಧ್ಯಯನದ ವಿಧಾನ

ಅಧ್ಯಾಯ - ಎರಡು

ಅಧ್ಯಯನದ ವಿಧಾನ

ಪ್ರೌಢಶಾಲಾ ಮಕ್ಕಳ ಕನ್ನಡದ ಬಳಕೆಯಲ್ಲಿ ಕಾಗುಣಿತ ದೋಷಗಳು ಎಂಬ ಈ ಅಧ್ಯಯನದ ವಿಧಾನವು. ಹಳ್ಳಿ ಮತ್ತು ನಗರ ಶಾಲೆಗಳ ಹಿನ್ನೆಲೆಯನ್ನು ಆಧರಿಸಿದೆ. ಇಲ್ಲಿ ಕಂಡುಬರುವ ದೋಷಗಳ ಪ್ರಮಾಣದಲ್ಲಿಯ ಅಂತರವನ್ನು ಕಂಡುಕೊಳ್ಳುವುದಕ್ಕಾಗಿ ಶಾಲಾವಾರು ಸಮೀಕ್ಷೆ ಕೈಗೊಳ್ಳಲಾಗಿದೆ. ಇದರ ಮೂಲಕ ಪ್ರಶ್ನಾವಳಿಯ ಸ್ವರೂಪ ಮತ್ತು ಕ್ಷೇತ್ರಕಾರ್ಯ ಎಂಬ ಉಪವಿಭಾಗಗಳನ್ನು ಮಾಡಿ ಮಾಹಿತಿ ಸಂಗ್ರಹಕ್ಕಾಗಿ ಕೆಲವು ಶಾಲೆಯ ಆಯ್ಕೆ ಮತ್ತು ಬೇಟಿಯ ಮೂಲಕ ಆಯ್ದ ವಿದ್ಯಾರ್ಥಿಗಳನ್ನು ಕೇಂದ್ರೀಕರಿಸಿಕೊಂಡು ಅವರು ಮಾಡಿರುವ ಕಾಗುಣಿತ ದೋಷಗಳ ವಿಂಗಡಣೆಯನ್ನು ಮಾಡಲಾಯಿತು.

೧. ಪ್ರಶ್ನಾವಳಿಯ ಸ್ವರೂಪ

ಪ್ರಶ್ನಾವಳಿಯ ಸ್ವರೂಪವನ್ನು ಶಾಲಾವಾರು ಸಂದರ್ಶನದಲ್ಲಿ ಪ್ರಮುಖವಾಗಿ ವಿದ್ಯಾರ್ಥಿಗಳ ಹಿನ್ನೆಲೆಯ ಸ್ವರೂಪ ಮತ್ತು ಪರೀಕ್ಷಾ ಮಾಡುವ ಭಾಷಾ ಸಾಮಗ್ರಿಗಳೆಂದು ಎರಡು ಮುಖ್ಯ ಭಾಗಗಳಾಗಿ ವಿಂಗಡಿಸಲಾಗಿದೆ.

1. ವಿದ್ಯಾರ್ಥಿಗಳ ಹಿನ್ನೆಲೆಯ ಸ್ವರೂಪ

ಇಲ್ಲಿಪ್ರೌಢಶಾಲಾ ವಿದ್ಯಾರ್ಥಿಗಳ ಶೈಕ್ಷಣಿಕ, ಸಾಮಾಜಿಕ ಮತ್ತು ಆರ್ಥಿಕ ಅನುಕೂಲಗಳನ್ನು ಕೇಂದ್ರೀಕರಿಸಿಕೊಳ್ಳಲಾಗಿದೆ. ಇದರ ಮೂಲಕ ಕಾಗುಣಿತ ದೋಷಗಳನ್ನು ವಿದ್ಯಾರ್ಥಿ ಸ್ವವಿವರದ ಹಿನ್ನೆಲೆಯಲ್ಲಿ ಹಳ್ಳಿ ಮತ್ತು ನಗರಶಾಲೆಯ ವಿದ್ಯಾರ್ಥಿಗಳನ್ನು ಸಾಮಾಜಿಕವಾಗಿ, ವಿದ್ಯಾರ್ಥಿಯ ಹೆಸರು, ಲಿಂಗವನ್ನಾಧರಿಸಿ ಗಂಡು ಮತ್ತು ಹೆಣ್ಣು ಎಂದು, ಜಾತಿಯನ್ನಾಧರಿಸಿ ಬ್ರಾಹ್ಮಣ ಲಿಂಗಾಯಿತ/ಒಕ್ಕಲಿಗ ಮತ್ತು ಇತರೇ ಎಂಬುವುದು ಬೇರೆಲ್ಲಾ ಜಾತಿಯನ್ನು ಸೇರಿಸಿಕೊಳ್ಳಲಾಗಿದೆ. ಹಾಗೆಯೇ ಮನೆಯ ಭಾಷೆಯನ್ನು ಕನ್ನಡ ಮತ್ತು ಇತರೇ ಎಂದು ಪರಿಗಣಿಸಲಾಗಿದೆ. (ಇತರೇ ಮಾತೃಭಾಷೆಯಲ್ಲಿ ತಮಿಳು, ತೆಲುಗು, ಉರ್ದು ಇತ್ಯಾದಿಯಾದ ಭಾಷೆ ಒಳಗೊಂಡಿರುವುದು)

ವಿದ್ಯಾರ್ಥಿ ಹಿನ್ನೆಲೆಯ ಶೈಕ್ಷಣಿಕ ಅಂಶಗಳನ್ನು ಪ್ರೌಢಶಾಲೆಯ ವಿವಿಧ ವರ್ಗವನ್ನಾಧರಿಸಿದಂತೆ ಎಂಟನೇ, ಒಂಬತ್ತನೇ ಮತ್ತು ಹತ್ತನೇ ತರಗತಿಯ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿಕೊಳ್ಳುವುದು ಹಾಗೆಯೇ ಶಾಲಾ ಮಾಧ್ಯಮವನ್ನಾಧರಿಸಿದಂತೆ ಕನ್ನಡ ಮಾಧ್ಯಮ ಮತ್ತು ಇಂಗ್ಲೀಷ್ ಮಾಧ್ಯಮವೆಂದು ಪರಿಗಣಿಸಲಾಗುವುದು.

ಹಾಗೆಯೇ ಆರ್ಥಿಕ ಅನುಕೂಲಗಳನ್ನು ಸ್ಥೂಲವಾದ ಹಿನ್ನೆಲೆಯಲ್ಲಿ ಕಾರು ಹೊಂದಿರುವವರನ್ನು ಶ್ರೀಮಂತರು, ದ್ವಿಚಕ್ರವಾಹನ ಹೊಂದಿರುವವರನ್ನು ಮಧ್ಯಮ ಎಂದೂ, ಕಾರು ಮತ್ತು ದ್ವಿಚಕ್ರ ವಾಹನಗಳಿಲ್ಲದವರನ್ನು ಇತರೇ ಎಂದು ತಕ್ಕಮಟ್ಟಿಗೆ ಪರಿಗಣಿಸಲಾಗಿದೆ. ಏಕೆಂದರೆ ವಿದ್ಯಾಥಿಗಳ ಆರ್ಥಿಕ ಹಿನ್ನಲೆಯ್ನು ಶಾಲೆಗಳಲ್ಲಿಯೂ ವಿವರವಾಗಿ ಪಡೆಯುವುದು ಕಷ್ಟವಾದ ಕೆಲಸವಾಗಿದೆ ಎಂಬುದನ್ನು ಮನಗಂಡು ಕಾರು ಹೊಂದಿರುವವರು (E1) ದ್ವಿಚಕ್ರವಾಹನ ಹೊಂದಿರುವವರು (E2) ಮತ್ತು ಇತರೇ (E3) ಎಂಬುವುದನ್ನು ಸಾಂಕೇತಿಕವಾಗಿ ಸ್ಥೂಲವಾದ ವಿಂಗಡಣೆ ಮಾಡಕೊಳ್ಳಲಾಗಿದೆ.

2. ಪರೀಕ್ಷೆ ಮಾಡುವ ಭಾಷಾ ಸಾಮಗ್ರಿ

ಹಳ್ಳಿ ಮತ್ತು ನಗರದ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಕಾಗುಣಿತ ದೋಷಗಳನ್ನು ಪರೀಕ್ಷೆ ಮಾಡಲು ಸೂಕ್ತ ಮೂರು ಉಪವಿಭಾಗಗಳಿಂದ ಭಾಷಾ ಸಾಮಗ್ರಿಗಳನ್ನು ಅಳವಡಿಸಿಕೊಳ್ಳಲಾಗಿದೆ. ಅವುಗಳೆಂದರೆ ಉಕ್ತಲೇಖನದ ಶಬ್ಧಗಳು ಮತ್ತು ಆಯ್ದ ಉಕ್ತಲೇಖನದ ವಾಕ್ಯಗಳು ಹಾಗೂ ವಿದ್ಯಾರ್ಥಿಗಳೇ ಸ್ವತಃ ಆಯ್ದ ವಿಷಯದ ಮೇಲೆ ಲಘು ಟಿಪ್ಪಣಿ ಬರೆಯುವುದು.

೧. ಉಕ್ತಲೇಖನದ ಶಬ್ಧಗಳು

ವಿದ್ಯಾರ್ಥಿಗಳ ಕಾಗುಣಿತ ದೋಷ ಕಂಡುಕೊಳ್ಳಲು ಉಕ್ತಲೇಖನದ ಆಯ್ದ ಶಬ್ಧಗಳಲ್ಲಿ ಹ್ರಸ್ವಸ್ವರ-ದೀರ್ಘಸ್ವರ, ಶ, ಷ, ಸ ಗಳ ಬಳಕೆ, 'ಅ'ಕಾರಾದಿ-'ಸ್ವ'ರಾದಿ, ಅಲ್ಪಪ್ರಾಣ-ಮಹಾಪ್ರಾಣ, ಒತ್ತಕ್ಷರಗಳಿಗೆ ಸಂಬಂಧಿಸಿದ ಮತ್ತು ಇತರೇ ವರ್ಣಗಳ ಹಿನ್ನೆಲೆಯಲ್ಲಿ ಉಕ್ತಲೇಖನಕ್ಕಾಗಿ ಆರಿಸಿಕೊಂಡ ಒಟ್ಟು ಮೂವತ್ತು ಶಬ್ಧಗಳನ್ನು ಬಳಸಿಕೊಳ್ಳಲಾಗಿದೆ.

ಇಲ್ಲಿ ಇತರೇ ವರ್ಣಗಳೆಂದರೆ ಉಕ್ತಲೇಖನದಲ್ಲಿ ಬಿಟ್ಟುಹೋದ ವರ್ಣ ಮತ್ತು ಅನವಶ್ಯಕವಾಗಿ ಸೇರ್ಪಡೆ ಮಾಡಿ ಬರೆದಿರುವ ಅಕ್ಷರ ಹಾಗೂ ತಪ್ಪಾಗಿ ಬರೆದ ಅಕ್ಷರವನ್ನು ಇತರೇ ಎಂದು ಭಾವಿಸಲಾಗಿದೆ.

ಉದಾ: ಮರವನ್ನು ಎಂಬುವುದನ್ನು ವಿದ್ಯಾರ್ಥಿಗಳು ಮರಗನ್ನು ಅಥವಾ ಮಗನ್ನು ಇಲ್ಲವೇ ಮರಳನ್ನು ಇತ್ಯಾದಿಯಾಗಿ ತಪ್ಪಾಗಿ ಬರೆದಿರುವುದು.

೨. ಉಕ್ತಲೇಖನದ ವಾಕ್ಯಗಳು

ಇಲ್ಲಿ ಶಬ್ದಗಳಂತೆ ವಿದ್ಯಾರ್ಥಿಗಳ ಕಾಗುಣಿತ ದೋಷಗಳನ್ನು ಕಂಡುಕೊಳ್ಳಲು ಸೂಕ್ತವಾದ ಹಿನ್ನೆಲೆಯಲ್ಲಿ ಒಟ್ಟು ಏಳು ಉಕ್ತಲೇಖನದ ವಾಕ್ಯಗಳನ್ನು ಆರಿಸಿಕೊಳ್ಳಲಾಗಿದೆ. ಇವು ಪೂರ್ವನಿಯೋಜಿತವಾದ ಅಂಶಗಳಿಂದ ಕೂಡಿರುತ್ತವೆ. ಈ ಏಳು ವಾಕ್ಯಗಳು ಒಟ್ಟು ಮೂವತ್ನಾಲ್ಕು ಶಬ್ಧಗಳನ್ನು ಹೊಂದಿರುತ್ತವೆ.

೩. ಲಘು ಟಿಪ್ಪಣಿ

ಪ್ರೌಢಶಾಲಾ ವಿದ್ಯಾರ್ಥಿಗಳ ಕಾಗುಣಿತ ದೋಷಗಳನ್ನು ಕಂಡುಕೊಳ್ಳಲು ವಿವಿಧ ಆಯ್ಕೆಯ ವಿಷಯಗಳಲ್ಲಿ ಯಾವುದಾದರೂ ಒಂದು ವಿಷಯಕ್ಕೆ ಸಂಬಂಧಿಸಿದಂತೆ ಅಥವಾ ವಿದ್ಯಾರ್ಥಿಗಳಿಗೆ ಗೊತ್ತಿರುವ ಯಾವುದೇ ಒಂದು ವಿಷಯದ ಮೇಲೆ ಲಘು ಟಿಪ್ಪಣಿ ಬರೆಯುವಂತೆ ಸೂಚಿಸಲಾಗುವುದು.

ಲಘುಟಿಪ್ಪಣಿಗೆ ಸಂಶೋಧಕರೇ ಕೊಟ್ಟಿರುವ ಕೆಲವು ಸಾಮಾನ್ಯ ವಿಷಯಗಳೆಂದರೆ. ೧) ನಾ ಮೆಚ್ಚಿದ ಪುಸ್ತಕ ೨) ನನ್ನ ನೆಚ್ಚಿನ ಆಟ ೩) ಕನ್ನಡ ಭಾಷೆ ೪) ನಾ ಮೆಚ್ಚಿದ ಸಾಹಿತಿ ೫) ನಾ ಮೆಚ್ಚಿದ ಸಿನೆಮಾ ೬) ಕಂಪ್ಯೂಟರ್ ಎಂದು ಒಟ್ಟು ಆರು ವಿಷಯಗಳನ್ನು ಕೊಡಲಾಗುವುದು.

(ವಿದ್ಯಾರ್ಥಿಗಳಿಗೆ ಕೊಡುವ ಮಾಹಿತಿ ಸಂಗ್ರಹಣೆಯಲ್ಲಿನ ವಿದ್ಯಾರ್ಥಿ ಸ್ವ-ವಿವರ ಉಕ್ತಲೇಖನದ ಶಬ್ಧಗಳು, ಉಕ್ತಲೇಖನದ ವಾಕ್ಯಗಳು ಹಾಗೂ ಲಘು ಟಿಪ್ಪಣಿಗೆ ಸಂಬಂಧಿಸಿದ ಭಾಷಾ ಸಾಮಗ್ರಿಗಳನ್ನು ಕೊನೆಯಲ್ಲಿ ಅನುಬಂಧ-೧ರಲ್ಲಿ ಕೊಡಲಾಗಿದೆ.)

೨. ಕ್ಷೇತ್ರಕಾರ್ಯ :

ಕನ್ನಡದ ಬಳಕೆಯಲ್ಲಿನ ಕಾಗುಣಿತ ದೋಷಗಳನ್ನು ಕಲೆಹಾಕಲು ಒಟ್ಟು ಹದಿನಾರು (೧೬) ಶಾಲೆಗಳನ್ನು ಗ್ರಾಮ ಮತ್ತು ನಗರದ ಹಿನ್ನೆಲೆಯಲ್ಲಿ ಕನ್ನಡ ಮತ್ತು ಆಂಗ್ಲ ಮಾಧ್ಯಮದ ಪ್ರೌಢಶಾಲೆಗಳನ್ನು ಮಾತ್ರ ಆಯ್ಕೆ ಮಾಡಿಕೊಳ್ಳಲಾಯಿತು.

ಶಾಲಾ ಭೇಟಿಯ ಸಂದರ್ಭದಲ್ಲಿ ನಗರದ ಪ್ರೌಢಶಾಲೆಗಳಿಗೆ ಸಂಬಂಧಿಸಿದಂತೆ ಮತ್ತುಗ್ರಾಮೀಣ ಶಾಲೆಗಳಿಗೆ ಸಂಬಂಧಿಸಿದಂತೆ ಇಡೀ ಕರ್ನಾಟಕದಾದ್ಯಂತ ಸಮೀಕ್ಷೆ ಮಾಡಲು ಸಂಶೋಧಕರಿಗೆ ಕಾಲಮಿತಿ ಇರುವುದರಿಂದ ಕೆಲವೇ ಆಯ್ದ ಶಾಲೆಗಳಿಂದ ಮಾಹಿತಿಯನ್ನು ಸಂಗ್ರಹಿಸಲು ನಿರ್ಧರಿಸಲಾಯಿತು. ಆದರೆ ಮುಂದಿನ ವ್ಯಾಪಕವಾದ ಅಧ್ಯಯನಕ್ಕೆ ಈ ಸಂಪ್ರಬಂಧವು ಮುನ್ನುಡಿಯೋಪಾದಿಯಲ್ಲಿ ನೆರವಾಗುತ್ತದೆ ಎಂದು ಭಾವಿಸಲಾಗಿದೆ.

ಆದ್ದರಿಂದ ನಗರಕ್ಕೆ ಸಂಬಂಧಿಸಿದಂತೆ ಬೆಂಗಳೂರು ನಗರದ ಎಂಟು (೮) ಪ್ರೌಢಶಾಲೆಗಳನ್ನು ಮಾತ್ರ ಆಯ್ಕೆಮಾಡಿಕೊಳ್ಳಲಾಯಿತು. ಅದರಲ್ಲಿ ಕನ್ನಡ ಮತ್ತು ಆಂಗ್ಲಮಾಧ್ಯಮದ ಶಾಲೆಗಳನ್ನು ಕೇಂದ್ರೀಕರಿಸಿಕೊಂಡು ಸರ್ಕಾರಿ ಶಾಲೆ, ಅನುದಾನಿತ ಶಾಲೆ ಮತ್ತು ಅನುದಾನರಹಿತ ಖಾಸಗಿ ಶಾಲೆಗಳಿಗೆ ಸಂಬಂಧಿಸಿದಂತೆ ಅವುಗಳ ರಾಜ್ಯ ಪಠ್ಯಕ್ರಮ, ಕೇಂದ್ರೀಯ ಮತ್ತು ಅಂತರರಾಷ್ಟ್ರೀಯ ಪಠ್ಯಕ್ರಮ ಹೊಂದಿರುವ ಶಾಲೆಗಳಿಗೆ ಭೇಟಿ ನೀಡಲಾಯಿತು.

ಹಾಗೆಯೇ ಗ್ರಾಮೀಣ ಪ್ರದೇಶಕ್ಕೆ ಸಂಬಂಧಿಸಿದಂತೆ ಶಿವಮೊಗ್ಗ ಜಿಲ್ಲೆಯ ಸಾಗರ, ಚನ್ನಪಟ್ಟಣ, ರಾಮನಗರ, ಕನಕಪುರ ಮತ್ತು ನೆಲಮಂಗಲದ ತಾಲ್ಲೂಕುಗಳಲ್ಲಿನ ಒಟ್ಟು ಎಂಟು (೮) ಗ್ರಾಮೀಣ ಪ್ರೌಢಶಾಲೆಗಳಿಗೆ ಭೇಟಿ ನೀಡಲಾಯಿತು. ಹಳ್ಳಿಗಳಲ್ಲಿ ಆಂಗ್ಲಮಾಧ್ಯಮದ ಶಾಲೆಗಳು ಕಡಿಮೆ ಪ್ರಮಾಣದಲ್ಲಿರುವುದರಿಂದ ಕನ್ನಡ ಮಾಧ್ಯಮ ಶಾಲೆಗಳನ್ನು ಆರಿಸಿಕೊಳ್ಳಲಾಯಿತು.

(ಈ ಹಳ್ಳಿ ಮತ್ತು ನಗರ ಶಾಲಾ ಸಂದರ್ಶನದ ಒಟ್ಟು ಹದಿನಾರು ಪ್ರೌಢಶಾಲೆಗಳ ವಿವರದ ಪಟ್ಟಿಕೆಯನ್ನು ಮುಂದೆ ಅನುಬಂಧ-೨ರಲ್ಲಿ ನೀಡಲಾಗುವುದು. ಇದರಲ್ಲಿ ಶಾಲೆಯ ವಿಳಾಸ, ಮುಖ್ಯೋಪಾಧ್ಯಾಯರು ಹಾಗೂ ಸಹ ಶಿಕ್ಷಕರ ಹೆಸರು, ತರಗತಿವಾರು ವಿದ್ಯಾರ್ಥಿಗಳ ಹೆಸರು ಮತ್ತು ಶಾಲಾ ಪಠ್ಯವನ್ನು ಕೊಡಲಾಗಿದೆ)

(ಅ) ಶಾಲಾಮುಖ್ಯೋಪಾಧ್ಯಾಯರಿಂದ ಅನುಮತಿ ಮತ್ತು ದಿನಾಂಕ ನಿಗದಿ

ಕನ್ನಡದ ಲಿಪಿ-ಚಿಹ್ನೆಗಳಲ್ಲಾಗುವ ದೋಷ ಪ್ರಮಾಣವನ್ನು ಕಂಡುಕೊಳ್ಳಲು ಹಳ್ಳಿ ಮತ್ತು ನಗರದ ಪ್ರೌಢಶಾಲೆಗಳನ್ನು ಸಮೀಕ್ಷೆ ಮಾಡುವುದರ ಮೂಲಕ ಆಯಾ ಪ್ರೌಢಶಾಲಾ ಮುಖ್ಯೋಪಾಧ್ಯಾಯರನ್ನು ಭೇಟಿ ಮಾಡಲಾಯಿತು. ನಂತರ ವಿದ್ಯಾರ್ಥಿ ಸಂದರ್ಶನದ ಅನುಮೋದನೆಗಾಗಿ ವಿನಂತಿ ಪತ್ರವನ್ನು ಕೊಟ್ಟು ಸಂಶೋಧನ ವಿಷಯದ ಬಗ್ಗೆ ಸಂಕ್ಷಿಪ್ತವಾಗಿ ಚರ್ಚಿಸಿ ಅನುಮತಿ ಪಡೆಯಲಾಯಿತು. ಕೆಲವು ಶಾಲೆಗಳಲ್ಲಿ ಭೇಟಿ ನೀಡಿದ ದಿನಾಂಕದಂದೇ ವಿದ್ಯಾರ್ಥಿಗಳಿಂದ ಮಾಹಿತಿ ಪಡೆಯಲಾಯಿತು. ಇನ್ನೂ ಕೆಲವು ಶಾಲೆಗಳಲ್ಲಿ ಸಮಯಾವಕಾಶದ ಕೊರತೆಯಿಂದಾಗಿ ಅವರು ನಿಗದಿಪಡಿಸಿದ ದಿನಾಂಕದಂದು ಸಂದರ್ಶನ ಮಾಡಲಾಯಿತು.

ಇಲ್ಲಿ ಈ ಸಂಶೋಧನೆಯ ಸಂದರ್ಶನದ ಕೆಲವು ಪ್ರೌಢಶಾಲೆಯ ಮುಖ್ಯೋಪಾಧ್ಯಾಯರು ಮುಕ್ತ ಮನಸ್ಸಿನಿಂದ ಒಪ್ಪಿಗೆಯನ್ನು ಸೂಚಿಸಿದ್ದರು. ಆದರೆ ಮತ್ತೆ ಕೆಲವು ಶಾಲೆಯ ಮುಖ್ಯೋಪಾಧ್ಯಾಯರು ಕ್ಷೇತ್ರ ಶಿಕ್ಷಣಾಧಿಕಾರಿಯ ಅನುಮತಿ ಪತ್ರ ತರಲು ಆಜ್ಞಾಪಿಸಿದರು. ನಂತರ ಅಧ್ಯಯನ ಸಂಸ್ಥೆಯಿಂದ ಪಡೆದ ವಿನಂತಿ ಪತ್ರವನ್ನು ನೋಡಿ ಅನುಮತಿಸಿದರು. ಅಲ್ಲದೆ ಅಂತರರಾಷ್ಟ್ರೀಯ ಶಾಲೆಗಳ ಮುಖ್ಯೋಪಾಧ್ಯಾಯರುಗಳು ಕನ್ನಡ ವಿಷಯದ ಬಗ್ಗೆ ರಾಜ್ಯ ಪಠ್ಯಕ್ರಮವಿರುವ ಶಾಲೆಗಳನ್ನು ಸಂದರ್ಶಿಸಲು ಸೂಚಿಸಿದರು. ಮತ್ತೆ ಕೆಲವು ಶಾಲೆಗಳ ಮುಖ್ಯೋಪಾಧ್ಯಾಯರು ಇಂತಹ ಸಂಶೋಧನೆಗಳಿಗಾಗಿ ಯುವಕರು ಮುಂದೆ ಬರಬೇಕೆಂದು ಪ್ರೋತ್ಸಾಹದ ಮಾರ್ಗದರ್ಶನ ನೀಡಿರುವುದುಂಟು.

(ಶಾಲಾ ಮುಖ್ಯೋಪಾಧ್ಯಾಯರಿಗೆ ಕೊಟ್ಟಿರುವ ವಿನಂತಿ ಪತ್ರವನ್ನು ಅನುಬಂಧ-೩ರಲ್ಲಿ ಕೊಡಲಾಗಿದೆ)

(ಆ) ಅಧ್ಯಾಪಕರಿಂದ ವಿದ್ಯಾರ್ಥಿಗಳ ಆಯ್ಕೆ

ಆಯಾ ಪ್ರೌಢಶಾಲೆಯ ಒಬ್ಬ ಸಹಶಿಕ್ಷಕರ ಸಹಾಯದಿಂದ ವಿದ್ಯಾರ್ಥಿಗಳ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕತೆಯ ಹಿನ್ನಲೆಯನ್ನಾಧರಿಸಿ ಮಕ್ಕಳನ್ನು ಆಯ್ಕೆ ಮಾಡಿಕೊಡುವಂತೆ ವಿನಂತಿಸಿಕೊಳ್ಳಲಾಯಿತು. ಅದರಲ್ಲಿ ಬುದ್ಧಿವಂತ, ಸಾಮಾನ್ಯ ಮತ್ತು

ಕೆಳಹಂತಗಳಲ್ಲಿನ ಬೌದ್ಧಿಕಮಟ್ಟವನ್ನಾಧರಿಸಿದ ವಿವಿಧ ಸ್ವ-ವಿವರದ ಹಿನ್ನಲೆಯ ವಿದ್ಯಾರ್ಥಿಗಳನ್ನು ಆರಿಸಿಕೊಡುವಂತೆ ಕೋರಲಾಯಿತು.

ಇಲ್ಲಿನ ಕೆಲವು ಶಾಲೆಯ ಕನ್ನಡ ಸಹಶಿಕ್ಷಕರು ಕನ್ನಡದಲ್ಲಾಗುವ ಕಾಗುಣಿತ ದೋಷಗಳ ಬಗ್ಗೆ ಕುತೂಹಲದಿಂದ ಚರ್ಚಿಸಿ, ಸೂಕ್ತ ವಿದ್ಯಾರ್ಥಿಗಳನ್ನು ಆರಿಸಿಕೊಟ್ಟರು. ಹೀಗೆ ಒಂದು ಶಾಲೆಯಿಂದ ಹತ್ತು ವಿದ್ಯಾರ್ಥಿಗಳನ್ನು ಸಂದರ್ಶಿಸಲು ಸೂಕ್ತ ಸ್ಥಳ ಮತ್ತು ಸಮಯಾವಕಾಶವನ್ನು ಒದಗಿಸಿಕೊಡುವುದರ ಮೂಲಕ ವಿದ್ಯಾರ್ಥಿ ಸಂದರ್ಶನಕ್ಕೆ ನೆರವಾದರು.

ಇ) ವಿದ್ಯಾರ್ಥಿಗಳ ಸಂದರ್ಶನ

ಒಟ್ಟು ಹದಿನಾರು ಶಾಲಾ ಸಂದರ್ಶನದಲ್ಲಿಯೂ ಹೆಣ್ಣು ಮತ್ತು ಗಂಡು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಅವರಿಗೆ ಕೊಟ್ಟ ಬರವಣಿಗೆಯ ಭಾಷಾ ಸಾಮಗ್ರಿಯನ್ನು ಸ್ವಂತ ಲೇಖನಿಯಿಂದ ಬರೆದರು.

ಹಾಗೆಯೇ ಸಂಶೋಧಕರೇ ಹೇಳುವ ಉಕ್ತಲೇಖನದ ಶಬ್ದಗಳನ್ನು ಮತ್ತು ವಾಕ್ಯಗಳನ್ನು ಹಾಗೂ ಟಿಪ್ಪಣಿಯನ್ನು ಆಸಕ್ತಿಯಿಂದ ಬರೆದರು. ಹೀಗೆ ವಿದ್ಯಾರ್ಥಿಗಳಿಂದ ಬರೆದ ಸಮಗ್ರ ಮಾಹಿತಿಗಳನ್ನು ಕಲೆಹಾಕಲಾಯಿತು.

೩. ಮಾಹಿತಿ ಕಂಪ್ಯೂಟರಿಗೆ ಅಳವಡಿಕೆ

ಗ್ರಾಮೀಣ ಮತ್ತು ನಗರ ಪ್ರೌಢಶಾಲಾ ಮಕ್ಕಳನ್ನು ಸಂದರ್ಶಿಸಿ ಕನ್ನಡದ ಬಳಕೆಯಲ್ಲಿ ಕಂಡುಬರುವ ಕಾಗುಣಿತ ದೋಷಗಳ ಮಾಹಿತಿಯನ್ನು ವಿದ್ಯಾರ್ಥಿಗಳಿಗೆ ಪೂರ್ವನಿಯೋಜಿತವಾದ ಮೂರು ಪುಟಗಳ ಮಾದರಿಯನ್ನು ನೀಡಿ ಅದರಲ್ಲಿ ವಿದ್ಯಾರ್ಥಿಗಳ ಸ್ವ-ವಿವರಕ್ಕೆ ಸಂಬಂಧಿಸಿದಂತೆ ಹೆಣ್ಣು ಮತ್ತು ಗಂಡು ಎಂಬ ಲಿಂಗವನ್ನಾಧರಿಸಿ ವಿದ್ಯಾರ್ಥಿಗಳ ಹೆಸರು, ಶಾಲೆ, ತರಗತಿ, ಶಾಲಾಮಾಧ್ಯಮ, ಜಾತಿ/ಧರ್ಮ, ಮನೆಯ ಭಾಷೆ, ತಂದೆ ತಾಯಿಯ ವೃತ್ತಿ ಹಾಗೂ ಆರ್ಥಿಕ ಹಿನ್ನಲೆಯನ್ನು ಪಡೆಯಲಾಯಿತು.

ನಂತರ ವಿದ್ಯಾರ್ಥಿಗಳಿಂದ ಕನ್ನಡ ಕಾಗುಣಿತದ ಲಿಪಿ-ಚಿಹ್ನೆಗಳಲ್ಲಾಗುವ ದೋಷಗಳನ್ನು ಕಂಡುಕೊಳ್ಳಲು ಪೂರ್ವನಿಯೋಜಿತವಾದ ಆಯ್ಕೆಯ ಮೂವತ್ತು

ಉಕ್ತಲೇಖನದ ಶಬ್ದಗಳನ್ನು ಕ್ರಮಬದ್ಧವಾಗಿ ತಪ್ಪಿಲ್ಲದಂತೆ ಸ್ವತಃ ಸಂಶೋಧಕರೇ ಸ್ಪಷ್ಟವಾಗಿ, ನಿಧಾನವಾಗಿ ಎರಡೆರಡು ಬಾರಿ ಉಚ್ಚರಿಸಿ ಹೇಳಲಾಯಿತು ಮತ್ತು ಒಂದು ಶಬ್ಧಕ್ಕೆ ಬೇಕಾಗುವ ಸಮಯಾವಕಾಶವನ್ನು ನೀಡಲಾಯಿತು. ಅಗತ್ಯವಿದ್ದಲ್ಲಿ ಮತ್ತೊಮ್ಮೆ ಉಚ್ಚರಿಸಿ ಹೇಳಲಾಯಿತು.

ಅದರಂತೆಯೇ ಉಕ್ತಲೇಖನದ ವಾಕ್ಯಗಳನ್ನು ಹೇಳುವಾಗ ಎರಡೆರಡು ಪದಗುಚ್ಛಗಳನ್ನು ನಿಧಾನವಾಗಿ ಸ್ಪಷ್ಟವಾಗಿ ಓದಿ ಹೇಳಲಾಯಿತು. ಅದರಂತೆಯೇ ವಿದ್ಯಾರ್ಥಿಗಳು ತಮ್ಮ ಸ್ವಪ್ರೇರಣೆಯಿಂದ ನಾನೇ ಸೂಚಿಸಿದ ವಿಷಯಗಳಲ್ಲಿ ಯಾವುದಾದರೂ ಒಂದು ವಿಷಯಕ್ಕೆ ಸಂಬಂಧಿಸಿದಂತೆ ಅಥವಾ ಆಯಾ ವಿದ್ಯಾರ್ಥಿಗಳಿಗೆ ಗೊತ್ತಿರುವ ಯಾವುದೇ ಒಂದು ವಿಷಯದ ಮೇಲೆ ಲಘು ಟಿಪ್ಪಣಿ ಬರೆಯುವಂತೆ ಸೂಚಿಸಲಾಯಿತು.

ಹೀಗೆ ಸುಮಾರು ನೂರಾ ಅರವತ್ತೇಳು (೧೬೭) ವಿದ್ಯಾರ್ಥಿಗಳಿಂದ ಮಾಹಿತಿಯನ್ನು ಕಲೆಹಾಕಲಾಯಿತು. ಅದನ್ನು ವಿವಿಧ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ವಿಷಯಗಳ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳು ಬರೆದ ಶಬ್ಧಗಳು, ವಾಕ್ಯಗಳು ಮತ್ತು ಲಘುಟಿಪ್ಪಣಿಗಳಲ್ಲಿನ ದೋಷಗಳನ್ನು ಲೆಕ್ಕಹಾಕಲು ಮತ್ತು ವಿಂಗಡಿಸಲು ಕಂಪ್ಯೂಟರಿಗೆ ಅಳವಡಿಸಲಾಯಿತು. (ಇದನ್ನು ಈ ಕೆಳಗಿನ ಕೋಷ್ಟಕ-೧ರಲ್ಲಿ ಕೊಡಲಾಗಿದೆ)

ಕೋಷ್ಟಕ-೧ : ವಿದ್ಯಾರ್ಥಿಗಳ ಕಾಗುಣಿತ ದೋಷಗಳು ಒಟ್ಟು ಸಂಖ್ಯೆಗಳಲ್ಲಿ

ಕ್ರ.ಸಂ.	ವಿದ್ಯಾರ್ಥಿ ವಿವರ	ಶಬ್ದಗಳು (A)		ವಾಕ್ಯಗಳು (B)		ಟಿಪ್ಪಣಿ (C)	
		ಹಳ್ಳಿ	ನಗರ	ಹಳ್ಳಿ	ನಗರ	ಹಳ್ಳಿ	ನಗರ
೧	ಗಂಡುಮಕ್ಕಳು	479 (47)	737 (49)	467 (47)	681 (49)	217 (47)	288 (49)
೨	ಹೆಣ್ಣುಮಕ್ಕಳು	241 (37)	458 (34)	247 (37)	390 (34)	145 (37)	131 (34)
೩	ತರಗತಿವಾರು (೮ ನೇ)	162 (26)	511 (28)	183 (26)	475 (28)	95 (26)	130 (28)
	(೯ನೇ)	292 (26)	336 (23)	264 (26)	297 (23)	139 (26)	127 (23)
	(೧೦ ನೇ)	266 (32)	436 (33)	259 (32)	348 (33)	128 (32)	173 (33)
೪	ಕನ್ನಡ ಮಾಧ್ಯಮ	720 (84)	190 (20)	714 (84)	162 (20)	372 (84)	53 (20)
೫	ಇಂಗ್ಲೀಷ್ ಮಾಧ್ಯಮ	-- --	685 393 (35)M (28)F	-- --	615 343 (35)M (28)F	--- --	256 110 (35)M (28)F
೬	ಜಾತಿವಾರು ೧. ಬ್ರಾಹ್ಮಣ	--- ---	90 61 (8)M (7) F	-- --	75 52 (8)M (7) F	--- ---	41 31 (8)M (7) F
	೨. ಲಿಂಗಾಯತ/ ಒಕ್ಕಲಿಗ	392 (44)	319 (25)	370 (44)	289 (25)	175 (44)	82 (25)
	೩. ಇತರೇ	328 (41)	725 (43)	341 (41)	658 (43)	183 (41)	262 (43)
೭	ಮನೆಯ ಭಾಷೆ ೧. ಕನ್ನಡ	651 (76)	603 (47)	643 (76)	524 (47)	299 (76)	197 (47)
	೨. ಇತರೇ	69 (8)	660 (37)	71 (8)	587 (37)	63 (8)	330 (37)
೮	ಆರ್ಥಿಕ ಅನುಕೂಲಗಳು ೧. ಕಾರು (E1)	22 (4)	361 (28)	15 (4)	304 (28)	9 (4)	103 (28)
	೨. ದ್ವಿಚಕ್ರವಾಹನ (E2)	296 (36)	679 (47)	538 (36)	620 (47)	159 (36)	187 (47)
	೩.ಇತರೇ (E3)	424 (47)	531 (29)	410 (47)	425 (29)	194 (47)	129 (29)

ಈ ಮೇಲಿನ ಕೋಷ್ಟಕದಲ್ಲಿ ಕ್ರಮವಾಗಿ ಕಾಲಂಗಳಲ್ಲಿ ಕ್ರಮಸಂಖ್ಯೆ ವಿದ್ಯಾರ್ಥಿ ವಿವರ, ವಿದ್ಯಾರ್ಥಿಗಳ ಒಟ್ಟು ಕಾಗುಣಿತ ದೋಷಗಳನ್ನು ಹಳ್ಳಿ ಮತ್ತು ನಗರಗಳನ್ನು ಆಧರಿಸಿ ಉಕ್ತಲೇಖನದ ಶಬ್ದಗಳ ಒಟ್ಟು ದೋಷಗಳನ್ನು 'A' ಎಂದು ಸಂಕೇತಿಸಲಾಗಿದ್ದು, ಉಕ್ತಲೇಖನದ ವಾಕ್ಯಗಳ ಒಟ್ಟು ದೋಷಗಳನ್ನು 'B' ಎಂದು ಮತ್ತು ವಿದ್ಯಾರ್ಥಿಗಳ ಒಟ್ಟು ಟಿಪ್ಪಣಿಯ ದೋಷಗಳನ್ನು (C) ಎಂದು ಸಂಕೇತಿಸಲಾಗಿದೆ.

ವಿದ್ಯಾರ್ಥಿ ವಿವರವನ್ನು ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಅನುಕೂಲತೆಗಳ ಹಿನ್ನೆಲೆಯಲ್ಲಿ ಕೊಡಲಾಗಿದೆ.

ಶಬ್ದಗಳ ಕಾಲಂಗಳಲ್ಲಿ ಹಳ್ಳಿ ಮತ್ತು ನಗರದ ಪ್ರೌಢಶಾಲಾ ವಿದ್ಯಾರ್ಥಿಗಳ ಒಟ್ಟು ದೋಷಗಳನ್ನು ಸಂಖ್ಯೆಗಳಲ್ಲಿ ಕೊಡಲಾಗಿದೆ. ಅವುಗಳ ಕೆಳಗಡೆ ಆವರಣದಲ್ಲಿ ಒಟ್ಟು ವಿದ್ಯಾರ್ಥಿಗಳ ಸಂಖ್ಯೆಯನ್ನು ಕೊಡಲಾಗಿದೆ. ಅವುಗಳು ಒಟ್ಟು ೩೦ ಶಬ್ಧಗಳಲ್ಲಿನ ದೋಷಗಳಾಗಿವೆ.

ಅದೇ ರೀತಿ ವಾಕ್ಯಗಳ ಕಾಲಂಗಳಲ್ಲಿಯೂ ಹಳ್ಳಿ ಮತ್ತು ವಿದ್ಯಾರ್ಥಿಗಳ ಒಟ್ಟು ಏಳು ವಾಕ್ಯಗಳಲ್ಲಿನ ಶಬ್ಧಗಳಲ್ಲಿ ಮಾಡಿರುವ ದೋಷಗಳನ್ನು ಸಂಖ್ಯೆಯ ಮೂಲಕ ಕೊಡಲಾಗಿದ್ದು, ಅದರ ಕೆಳಗಿನ ಆವರಣದಲ್ಲಿರುವ ಸಂಖ್ಯೆಯು ಒಟ್ಟು ವಿದ್ಯಾರ್ಥಿಗಳನ್ನು ಸೂಚಿಸುತ್ತದೆ.

ಹಾಗೆಯೇ ವಿದ್ಯಾರ್ಥಿಗಳು ಒಂದು ವಿಷಯದ ಮೇಲೆ ಬರೆದಿರುವ ಟಿಪ್ಪಣಿಯಲ್ಲಿ ಕೇವಲ ನಲವತ್ತು ಶಬ್ಧಗಳನ್ನು ಮಾತ್ರ ಗಣನೆಗೆ ತೆಗೆದು ಕೊಳ್ಳಲಾಗಿದ್ದು, ಉಳಿದವುಗಳನ್ನು ಬಿಟ್ಟುಕೊಡಲಾಗಿದೆ. ಕಾರಣ ಅತಿ ಕನಿಷ್ಠ ೪೦ ಶಬ್ದಗಳಲ್ಲಿ ಬರೆದಿರುವ ಟಿಪ್ಪಣಿಯ ಹಿನ್ನೆಲೆಯಲ್ಲಿನ ಆಧಾರವನ್ನು ಮಾತ್ರ ಪಡೆದು ಉಳಿದಿರುವ ಅಂಶವನ್ನು ಬಿಟ್ಟುಕೊಡಲಾಗಿದೆ. ಆದ್ದರಿಂದ ಟಿಪ್ಪಣಿಯ ಕಾಲಂನಲ್ಲೂ ಹಳ್ಳಿ ಮತ್ತು ನಗರದ ವಿದ್ಯಾರ್ಥಿಗಳ ನಲವತ್ತು ಶಬ್ಧಗಳನ್ನಾಧರಿಸಿದಂತೆ ಒಟ್ಟು ದೋಷಗಳ ಸಂಖ್ಯೆಯನ್ನು ಕೊಡಲಾಗಿದೆ. ಅದರ ಕೆಳಗಡೆ ಆವರಣದಲ್ಲಿ ವಿದ್ಯಾರ್ಥಿಗಳ ಒಟ್ಟು ಸಂಖ್ಯೆ ಕಂಡುಬರುವುದು.

ವಿದ್ಯಾರ್ಥಿ ವಿವರದ ಕಾಲಂಗಳಲ್ಲಿನ ೫ ಮತ್ತು ೬ ರ ಕ್ರಮಸಂಖ್ಯೆಯು ಇಂಗ್ಲೀಷ್ ಮಾಧ್ಯಮ ಮತ್ತು ಬ್ರಾಹ್ಮಣ ಜಾತಿಯ ಬಗ್ಗೆ ತಿಳಿಸಲಾಗಿದೆ. ಈ ಎರಡು ಕಾಲಂಗಳು

ಶಬ್ಧಗಳು, ವಾಕ್ಯಗಳು ಮತ್ತು ಟಿಪ್ಪಣಿಗಳಲ್ಲಿ ಹಳ್ಳಿಯ ವಿದ್ಯಾರ್ಥಿಗಳನ್ನು ಹೊಂದಿರುವುದಿಲ್ಲ. ಏಕೆಂದರೆ ನಾನು ಸಂದರ್ಶಿಸಿದ ಹಳ್ಳಿ ಪ್ರದೇಶದ ಶಾಲೆಗಳಲ್ಲಿ ಆಂಗ್ಲಮಾಧ್ಯಮದ ಶಾಲೆ ಮತ್ತು ಬ್ರಾಹ್ಮಣ ವಿದ್ಯಾರ್ಥಿಗಳಿರುವುದಿಲ್ಲ. ಅದಕ್ಕಾಗಿ ಕೇವಲ ನಗರ ಪ್ರದೇಶದ ಶಾಲೆಗಳಲ್ಲಿಯೇ ಶಬ್ಧಗಳಲ್ಲಿ ಮಾಡಿರುವ ಒಟ್ಟು ದೋಷಗಳ ಸಂಖ್ಯೆ ಕೊಡಲಾಗಿದೆ. ಅವುಗಳ ಕೆಳಗಿನ ಆವರಣದಲ್ಲಿ ಗಂಡು ಮಕ್ಕಳ ಸಂಖ್ಯೆ ಮತ್ತು ಹೆಣ್ಣುಮಕ್ಕಳ ಒಟ್ಟು ಸಂಖ್ಯೆಯನ್ನು ಕೊಡಲಾಗಿದೆ.

ಹಾಗೆಯೇ ಉಕ್ತಲೇಖನದ ವಾಕ್ಯಗಳ ಕಾಲಂಗಳಲ್ಲಿಯೂ ಗಂಡುಮಕ್ಕಳು ಮತ್ತು ಹೆಣ್ಣುಮಕ್ಕಳು ಮಾಡಿರುವ ಒಟ್ಟು ದೋಷಗಳ ಸಂಖ್ಯೆಯನ್ನು ಕೊಡಲಾಗಿದೆ. ಅವುಗಳ ಕೆಳಗೆ ಆವರಣದಲ್ಲಿ ವಿದ್ಯಾರ್ಥಿಗಳ ಒಟ್ಟು ಸಂಖ್ಯೆ ಮತ್ತು ಲಿಂಗವನ್ನು ಸೂಚಿಸಲಾಗಿದೆ.

ಅದರಂತೆ ಟಿಪ್ಪಣಿಯ ಕಾಲಂಗಳಲ್ಲೂ ೪೦ ಶಬ್ಧಗಳಿಗೆ ಮಾಡಿರುವ ಒಟ್ಟು ದೋಷಗಳನ್ನು ಸಂಖ್ಯೆಗಳಲ್ಲಿ ನೀಡಲಾಗಿದೆ. ಅದರ ಕೆಳಗಡೆ ಆವರಣದಲ್ಲಿ ಗಂಡು ಮತ್ತು ಹೆಣ್ಣುಮಕ್ಕಳ ಒಟ್ಟು ವಿದ್ಯಾರ್ಥಿ ಸಂಖ್ಯೆಯನ್ನು ಕೊಡಲಾಗಿದೆ.

ಆರ್ಥಿಕ ವರ್ಗವನ್ನು ಕ್ರಮವಾಗಿ ಮತ್ತುಸ್ಥಾಲವಾಗಿ ಕಾರು ಹೊಂದಿರುವವರನ್ನು (E1) ಎಂದು, ದ್ವಿಚಕ್ರವಾಹನ ಹೊಂದಿರುವವರನ್ನು (E2)ಎಂತಲೂ, ಇತರೇ ವಿದ್ಯಾರ್ಥಿಗಳನ್ನು (E3) ಎಂದು ಸಂಕೇತಿಸಲಾಗಿದೆ.

ಸರಾಸರಿಯ ಲೆಕ್ಕ

ಮಾಧ್ಯಮಿಕ ಶಾಲೆಯ ಒಟ್ಟು ವಿದ್ಯಾರ್ಥಿಗಳ ಕಾಗುಣಿತ ದೋಷಗಳನ್ನು ಅವರ ಸ್ವವಿವರದ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳ ಲಿಂಗವನ್ನು ಆಧರಿಸಿ ಶಾಲಾಮಾಧ್ಯಮ ತರಗತಿವಾರು ಜಾತಿಯ ಹಿನ್ನೆಲೆಯಲ್ಲಿ ಮನೆಯಭಾಷೆ ಮತ್ತು ಆರ್ಥಿಕ ಅನುಕೂಲಗಳನ್ನು ಆಧರಿಸಿದಂತೆ ವಿದ್ಯಾರ್ಥಿಗಳು ಉಕ್ತಲೇಖನದ ಮೂವತ್ತು ಶಬ್ಧಗಳಲ್ಲಿ ಮಾಡಿರುವ ಒಟ್ಟು ದೋಷಗದಳ ಸಂಖ್ಯೆಯನ್ನು ಒಟ್ಟು ವಿದ್ಯಾರ್ಥಿಗಳಿಂದ ಭಾಗಿಸಿದಾಗ ಒಟ್ಟು ಶಬ್ದಗಳಲ್ಲಿನ ಒಂದು ಶಬ್ಧಕ್ಕೆ ಒಬ್ಬ ವಿದ್ಯಾರ್ಥಿ ಮಾಡಿರುವ ಸರಾಸರಿ ದೋಷ ತಿಳಿದುಬರುತ್ತದೆ.

ಅದರಂತೆ ಉಕ್ತಲೇಖನದ ಏಳು ವಾಕ್ಯಗಳಲ್ಲಿ ಮುವತ್ನಾಲ್ಕು ಶಬ್ಧಗಳಿವೆ. ಈ ಮೂವತ್ನಾಲ್ಕು ಶಬ್ಧಗಳಲ್ಲಿ ಮಾಡಿರುವ ಒಟ್ಟು ದೋಷಗಳ ಸಂಖ್ಯೆಯನ್ನು ಒಟ್ಟು

ವಿದ್ಯಾರ್ಥಿಗಳಿಂದ ಭಾಗಿಸಿ ಬಂದ ಫಲಿತಾಂಶವನ್ನು ಮೂವತ್ನಾಲ್ಕು ಶಬ್ಧಗಳಿಂದ ಭಾಗಿಸಿದರೆ ಏಳು ವಾಕ್ಯಗಳಲ್ಲಿನ ಮೂವತ್ನಾಲ್ಕು ಶಬ್ಧಗಳಲ್ಲಿ ಒಂದು ಶಬ್ಧಕ್ಕೆ ಒಬ್ಬ ವಿದ್ಯಾರ್ಥಿ ಮಾಡುವ ಸರಾಸರಿ ದೋಷ ಸಿಗುತ್ತದೆ.

ಹಾಗೆಯೇ ವಿದ್ಯಾರ್ಥಿಗಳು ಅನಿರ್ದಿಷ್ಟವಾಗಿ ಬರೆದ ಟಿಪ್ಪಣಿಗಳಲ್ಲಿ ಅತಿಕಡಿಮೆ ನಲವತ್ತು ಶಬ್ಧಗಳಲ್ಲಿ ಬರೆದ ವಿದ್ಯಾರ್ಥಿಯ ತಪ್ಪುಗಳನ್ನಾಧರಿಸಿ ಎಲ್ಲಾ ವಿದ್ಯಾರ್ಥಿಗಳು ಅನಿರ್ದಿಷ್ಟವಾಗಿ ಬರೆದ ಟಿಪ್ಪಣಿಯನ್ನು ಕೇವಲ ನಲವತ್ತು ಶಬ್ಧಗಳಿಗೆ ಮಾತ್ರ ಲೆಕ್ಕಕ್ಕೆ ತೆಗೆದುಕೊಳ್ಳಲಾಗಿದೆ. ಉಳಿದ ಬರವಣಿಗೆಯನ್ನು ಬಿಟ್ಟುಕೊಡಲಾಗಿದೆ.

ಇದರ ಹಿನ್ನೆಲೆಯಲ್ಲಿ ಟಿಪ್ಪಣಿಯಲ್ಲಿ ಮಾಡಿರುವ ಒಟ್ಟು ದೋಷಗಳನ್ನು, ಒಟ್ಟು ವಿದ್ಯಾರ್ಥಿಗಳಿಂದ ಭಾಗಿಸಿ ಬಂದ ಉತ್ತರವನ್ನು ಮತ್ತೆ ನಲವತ್ತು ಶಬ್ಧಗಳಿಂದ ಭಾಗಿಸಿದಾಗ, ಟಿಪ್ಪಣಿಯಲ್ಲಿ ಒಂದು ಶಬ್ಧಕ್ಕೆ ಒಬ್ಬ ವಿದ್ಯಾರ್ಥಿ ಮಾಡುವ ದೋಷಗಳ ಸರಾಸರಿಯನ್ನು ಕಂಡುಕೊಳ್ಳಲಾಗಿದೆ. (ವಿದ್ಯಾರ್ಥಿ ಸ್ವ-ವಿವರದ ಕಾಗುಣಿತ ದೋಷಗಳ ಸರಾಸರಿ ಪಟ್ಟಿಕೆಯನ್ನು ಈ ಕೆಳಗಿನ ಕೋಷ್ಟಕ-೨ರಲ್ಲಿ ಕೊಡಲಾಗಿದೆ)

ಕೋಷ್ಟಕ-೨ : ವಿದ್ಯಾರ್ಥಿ ಸ್ವ-ವಿವರದ ಕಾಗುಣಿತ ದೋಷಗಳ ಸರಾಸರಿ ಪಟ್ಟಿಕೆ

ಕ್ರ.ಸಂ.	ವಿದ್ಯಾರ್ಥಿ ವಿವರ	ಶಬ್ದಗಳು (A)		ವಾಕ್ಯಗಳು (B)		ಟಿಪ್ಪಣಿ (C)	
		ಹಳ್ಳಿ	ನಗರ	ಹಳ್ಳಿ	ನಗರ	ಹಳ್ಳಿ	ನಗರ
೧	ಗಂಡುಮಕ್ಕಳು	0.33	0.50	0.29	0.41	0.11	0.14
೨	ಹೆಣ್ಣುಮಕ್ಕಳು	0.21	0.44	0.21	0.34	0.09	0.09
೩	ತರಗತಿವಾರು						
	(೮ ನೇ)	0.21	0.61	0.21	0.41	0.9	0.11
	(೯ನೇ)	0.37	0.48	0.28	0.35	0.13	0.13
	(೧೦ ನೇ)	0.28	0.44	0.21	0.28	0.1	0.13
೪	ಕನ್ನಡ ಮಾಧ್ಯಮ	0.29	0.31	0.28	0.21	0.11	0.06
೫	ಇಂಗ್ಲೀಷ್ ಮಾಧ್ಯಮ	--	0.65 (M) 0.47 (F)	--	0.49 (M) 0.35 (F)	---	0.09 (M) 0.18 (F)
೬	ಜಾತಿವಾರು						
	೧. ಬ್ರಾಹ್ಮಣ	---	0.30 (M) 0.29 (F)	--	0.28 (M) 0.21 (F)	---	0.11 (M) 0.12 (F)
	೨. ಲಿಂಗಾಯತ/ ಒಕ್ಕಲಿಗ	0.30	0.43	0.28	0.35	0.09	0.08
	೩. ಇತರೇ	0.27	0.56	0.28	0.42	0.11	0.15
೭	ಮನೆಯ ಭಾಷೆ						
	೧. ಕನ್ನಡ	0.29	0.43	0.28	0.35	0.09	0.10
	೨. ಇತರೇ	0.29	0.59	0.28	0.46	0.19	0.22
೮	ಆರ್ಥಿಕ ಅನುಕೂಲಗಳು						
	೧. ಕಾರು (E1)	0.81	0.43	0.14	0.28	0.05	0.09
	೨. ದ್ವಿಚಕ್ರವಾಹನ (E2)	0.27	0.48	0.42	0.43	0.11	0.09
	೩.ಇತರೇ (E3)	0.30	0.61	0.28	0.42	0.10	0.11

ಈ ಮೇಲಿನ ಕೋಷ್ಟಕದಲ್ಲಿ ಕ್ರಮವಾಗಿ ಕಾಲಂಗಳಲ್ಲಿ ಕ್ರಮಸಂಖ್ಯೆ ವಿದ್ಯಾರ್ಥಿ ಸ್ವ-ವಿವರ ಕಾಗುಣಿತ ದೋಷಗಳ ಸರಾಸರಿಯನ್ನು ಹಳ್ಳಿ ಮತ್ತು ನಗರಗಳನ್ನು ಆಧರಿಸಿ ಉಕ್ತಲೇಖನದ ಶಬ್ಧಗಳಲ್ಲಿನ ದೋಷಗಳ ಸರಾಸರಿಯನ್ನು 'A' ಎಂದು ಸಂಕೇತಿಸಲಾಗಿದೆ. ಉಕ್ತಲೇಖನದ ವಾಕ್ಯಗಳಲ್ಲಿನ ಪ್ರತಿ ಶಬ್ಧಕ್ಕೆ ಕಂಡುಕೊಂಡ ದೋಷಗಳ ಸರಾಸರಿಯನ್ನು 'B' ಎಂದು ಸಂಕೇತಿಸಲಾಗಿದೆ. ಹಾಗೆಯೇ ಟಿಪ್ಪಣಿಗಳಲ್ಲಿನ ಒಟ್ಟುದೋಷಗಳಲ್ಲಿನ ಸರಾಸರಿಯನ್ನು 'C' ಎಂದು ಸಂಕೇತಿಸಲಾಗಿದೆ.

ಇಲ್ಲಿ ವಿದ್ಯಾರ್ಥಿಗಳ ವಿವರಗಳನ್ನು ಅವರ ಸಾಮಾಜಿಕವಾದ ಲಿಂಗವನ್ನು ಆಧರಿಸಿ, ಜಾತಿಯ ಹಿನ್ನಲೆಯನ್ನು ಮತ್ತು ಮನೆಯ ಭಾಷೆಯನ್ನು ಅವಲಂಭಿಸಿರುತ್ತದೆ. ಶೈಕ್ಷಣಿಕವಾಗಿ ವಿದ್ಯಾರ್ಥಿಗಳ ಶಾಲಾ ಮಾಧ್ಯಮ, ತರಗತಿವಾರು ಹಿನ್ನೆಲೆ ಅವಲಂಬಿಸಿದೆ. ಹಾಗೆಯೇ ಆರ್ಥಿಕವಾಗಿ ಸ್ಥೂಲವಾದ ಕಾರು, ದ್ವಿಚಕ್ರವಾಹನ ಮತ್ತು ಇತರೆಯನ್ನು ಸೂಚಿಸುತ್ತದೆ.

ವಿದ್ಯಾರ್ಥಿ ಸ್ವ-ವಿವರದ ಆಂಗ್ಲಮಾಧ್ಯಮದ ಕಾಲಂ ಮತ್ತು ಬ್ರಾಹ್ಮಣ ಜಾತಿಯ ಕಾಲಂಗಳು ಹಳ್ಳಿಯ ವಿದ್ಯಾರ್ಥಿಯ ಸರಾಸರಿ ತಿಳಿಸಿರುವುದಿಲ್ಲ. ಇದಕ್ಕೆ ಕಾರಣವನ್ನು ಈ ಮೊದಲೇ ತಿಳಿಸಲಾಗಿದೆ. ಅದಕ್ಕಾಗಿ ಉಕ್ತಲೇಖನದ ಶಬ್ಧಗಳು, ವಾಕ್ಯಗಳಲ್ಲಿನ ಪ್ರತಿ ಶಬ್ಧದ ಸರಾಸರಿಯೂ ಹಾಗೂ ಟಿಪ್ಪಣಿಯ ಸರಾಸರಿಯು ನಗರ ಪ್ರದೇಶದ ವಿದ್ಯಾರ್ಥಿಗಳ ಲಿಂಗವನ್ನು (ಗಂಡು ಮತ್ತು ಹೆಣ್ಣು) ಆಧರಿಸಿ, ಪ್ರತಿ ಶಬ್ಧದಲ್ಲಿ ಒಬ್ಬ ವಿದ್ಯಾರ್ಥಿಯ ದೋಷಗಳ ಸರಾಸರಿಯನ್ನು ಸೂಚಿಸುತ್ತದೆ.

ಈ ಮೂಲಕ ವಿದ್ಯಾರ್ಥಿಗಳು ಮಾಡುವ ಕಾಗುಣಿತ ದೋಷಗಳ ಸರಾಸರಿ ಪಟ್ಟಿಕೆಯಲ್ಲಿ ವಿದ್ಯಾರ್ಥಿ ವಿವರ, ಶಬ್ಧಗಳು ಮತ್ತು ವಾಕ್ಯಗಳಲ್ಲಿನ ಪ್ರತಿ ಶಬ್ಧಕ್ಕೆ ಮತ್ತು ಟಿಪ್ಪಣಿಯ ಪ್ರತೀ ಶಬ್ಧಕ್ಕೆ ಸಂಬಂಧಿಸಿದಂತೆ ಗ್ರಾಮೀಣ ಮತ್ತು ನಗರ ಪ್ರದೇಶದ ಒಬ್ಬ ವಿದ್ಯಾರ್ಥಿಯ ಸರಾಸರಿ ದೋಷವನ್ನು ತಿಳಿಸುತ್ತದೆ.

ಅಧ್ಯಾಯ - ಮೂರು


ಕನ್ನಡದಲ್ಲಿ ಕಾಗುಣಿತ ದೋಷಗಳ ಸ್ವರೂಪ

ಅಧ್ಯಾಯ-ಮೂರು

ಕನ್ನಡದಲ್ಲಿ ಕಾಗುಣಿತ ದೋಷಗಳ ಸ್ವರೂಪ

೧. ಕಾಗುಣಿತ ದೋಷಗಳ ವಿಂಗಡಣೆ ಮತ್ತು ಸ್ವರೂಪ

ಪ್ರೌಢಶಾಲಾ ಮಕ್ಕಳು ಮಾಡುವ ಕಾಗುಣಿತ ದೋಷಗಳನ್ನು ಕಂಡುಕೊಳ್ಳಲು ಉಕ್ತಲೇಖನದ ಶಬ್ಧಗಳು, ಉಕ್ತಲೇಖನದ ವಾಕ್ಯಗಳು ಮತ್ತು ಲಘು ಟಿಪ್ಪಣಿಗಳೆಂದು ಮೂರು ಪ್ರಕಾರಗಳಾಗಿ ವಿಂಗಡಿಸಲಾಗಿದೆ. ಅವುಗಳಿಗೆ ಕ್ರಮಬದ್ಧವಾಗಿ A, B ಮತ್ತು C ಎಂಬ ಸಂಕೇತವನ್ನು ಕೊಡಲಾಗಿದೆ. ಅದನ್ನು ಈ ಕೆಳಗಿನ ಕೋಷ್ಟಕ-೩೮ ರೇಖಾಚಿತ್ರದಲ್ಲಿ ಕೊಡಲಾಗಿದೆ.



ದೋಷಗಳ ಪ್ರಕಾರಗಳು:

1.	ಹ್ರಸ್ವಸ್ವರ - ದೀರ್ಘಸ್ವರ	A_1	B_1	C_1
2.	ಶ, ಷ, ಸ	A_2	B_2	C_2
3.	'ಅ'ಕಾರಾದಿ-'ಸ್ವ'ರಾದಿ	A_3	B_3	C_3
4.	ಅಲ್ಪಪ್ರಾಣ-ಮಹಾಪ್ರಾಣ	A_4	B_4	C_4
5.	ಒತ್ತಕ್ಷರಗಳು	A_5	B_5	C_5
6.	ಇತರೇ	A_6	B_6	C_6
	ಒಟ್ಟು			

ಈ ಮೇಲಿನ ಕೋಷ್ಟಕದಲ್ಲಿ ಕೊಟ್ಟಿರುವಂತೆ ಕನ್ನಡದ ಬಳಕೆಯಲ್ಲಿನ ಕಾಗುಣಿತ ದೋಷಗಳನ್ನು ಕಂಡುಕೊಳ್ಳಲು ಶಬ್ಧಗಳು(A), ವಾಕ್ಯಗಳು (B) ಮತ್ತು ಟಿಪ್ಪಣಿ (C)ಗಳನ್ನು ಬಳಸಿಕೊಳ್ಳಲಾಯಿತು. ಹಾಗೆಯೇ ಇವುಗಳಲ್ಲಿನ ದೋಷಗಳನ್ನು ಹ್ರಸ್ವಸ್ವರ-ದೀರ್ಘಸ್ವರ ದೋಷವನ್ನು A_1, B_1, C_1(ಶಬ್ಧ, ವಾಕ್ಯ ಮತ್ತು ಟಿಪ್ಪಣಿ)ಎಂತಲೂ, ಶ, ಷ, ಸ ಗಳ ದೋಷವನ್ನು A_2, B_2, C_2(ಶಬ್ಧ, ವಾಕ್ಯ ಮತ್ತು ಟಿಪ್ಪಣಿ) ಎಂದು, 'ಅ'ಕಾರಾದಿ -'ಸ್ವ'ರಾದಿಗಳನ್ನು A_3, B_3, C_3 (ಶಬ್ಧ, ವಾಕ್ಯ ಮತ್ತು ಟಿಪ್ಪಣಿ) ಎಂತಲೂ, ಅಲ್ಪಪ್ರಾಣ-ಮಹಾಪ್ರಾಣ ದೋಷವನ್ನು A_4, B_4, C_4 (ಶಬ್ಧ, ವಾಕ್ಯ ಮತ್ತು ಟಿಪ್ಪಣಿ) ಎಂದು, ಒತ್ತಕ್ಷರಗಳನ್ನು A_5, B_5, C_5 (ಶಬ್ಧ, ವಾಕ್ಯ ಮತ್ತು ಟಿಪ್ಪಣಿ) ಎಂತಲೂ, ಇವುಗಳಿಗೆ ಸಂಬಂಧಿಸಿದ ಇತರೇ ದೋಷಗಳನ್ನು A_6, B_6, C_6 (ಶಬ್ಧ, ವಾಕ್ಯ ಮತ್ತು ಟಿಪ್ಪಣಿ) ಎಂದು ಸಂಕೇತಿಸಲಾಗಿದೆ.

೧. ಶಬ್ಧಗಳು

ಕಾಗುಣಿತ ದೋಷಗಳ ವಿಂಗಡಣೆಯಲ್ಲಿ ಉಕ್ತಲೇಖನದ ಶಬ್ದಗಳನ್ನು ಮೊದಲಿಗೆ ಬಳಸಿಕೊಳ್ಳಲಾಯಿತು. ಇದನ್ನು 'A' ಎಂದು ಸಂಕೇತಿಸಲಾಗಿದೆ. ಇದರಲ್ಲಿನ ದೋಷಗಳ ಪ್ರಕಾರಗಳನ್ನು A_1, A_2, A_3, A_4, A_5 ಮತ್ತು A_6 ಎಂದು ವಿಭಾಗಿಸಲಾಗಿದೆ. ಇಲ್ಲಿ ಮೂವತ್ತು (೩೦) ಉಕ್ತಲೇಖನದ ಸೂಕ್ತ ಶಬ್ಧದಲ್ಲಿನ ದೋಷಗಳಲ್ಲಿನ ಪ್ರಕಾರಗಳ ಹಿನ್ನೆಲೆಯಲ್ಲಿ ಆರಿಸಿಕೊಳ್ಳಲಾಗಿದೆ.

೨. ವಾಕ್ಯಗಳು

ವಿದ್ಯಾರ್ಥಿಗಳ ದೋಷ ಪ್ರಮಾಣ ಕಂಡುಕೊಳ್ಳಲು ಒಟ್ಟು ಏಳು (೭) ಉಕ್ತಲೇಖನದ ವಾಕ್ಯಗಳನ್ನು ಬಳಸಲಾಯಿತು. ಇದನ್ನು 'B' ಎನ್ನುವ ಸಂಕೇತದಿಂದ ಗುರುತಿಸಲಾಗಿದೆ. ಇದರಲ್ಲಿ ಒಟ್ಟು ಮೂವತ್ನಾಲ್ಕು ಶಬ್ಧಗಳಿವೆ. ಇದು B_1, B_2, B_3, B_4, B_5 ಮತ್ತು B_6 ಎಂಬ ದೋಷ ಪ್ರಕಾರಗಳ ಸಂಕೇತದಿಂದ ಕೂಡಿದೆ. ಈ ವಾಕ್ಯಗಳಲ್ಲಿ ಕಂಡುಬರುವ ದೋಷಗಳ ಪ್ರಮಾಣವನ್ನು ಲೆಕ್ಕಹಾಕಿ, ಒಟ್ಟು ವಿದ್ಯಾರ್ಥಿಗಳು ವಾಕ್ಯದಲ್ಲಿ ಮಾಡಿರುವ ಒಟ್ಟು ದೋಷವನ್ನು ಒಟ್ಟು ವಿದ್ಯಾರ್ಥಿಗಳಿಂದ ಭಾಗಿಸಿ ನಂತರ ಏಳು ವಾಕ್ಯದಿಂದ ಭಾಗಿಸಿದರೆ ಒಬ್ಬ ವಿದ್ಯಾರ್ಥಿ ಒಂದು ವಾಕ್ಯದಲ್ಲಿ ಮಾಡಿರುವ ದೋಷವನ್ನು ಪತ್ತೆ ಹಚ್ಚಲಾಯಿತು. ಅದರಂತೆ ವಾಕ್ಯದಲ್ಲಿನ ಪ್ರತಿ ಶಬ್ಧದಲ್ಲಿ ಮಾಡುವ ದೋಷವನ್ನು ವಾಕ್ಯದಲ್ಲಿನ ಮೂವತ್ನಾಲ್ಕು ಶಬ್ಧಗಳಿಂದ ಭಾಗಿಸಿ ಸರಾಸರಿಯನ್ನು ಕಂಡು ಕೊಳ್ಳಲಾಗುವುದು.

೩. ಲಘುಟಿಪ್ಪಣಿ

ಕಾಗುಣಿತ ದೋಷಗಳನ್ನು ಕಂಡುಕೊಳ್ಳಲು ವಿದ್ಯಾರ್ಥಿಗಳ ಸ್ವಂತ ಬರವಣಿಗೆಯೋಪಾದಿಯಲ್ಲಿ ಲಘುಟಿಪ್ಪಣಿಯನ್ನು ಬಳಸಿಕೊಳ್ಳಲಾಯಿತು. ಇದನ್ನು 'C' ಎಂದು ಸಂಕೇತಿಸಲಾಗಿದೆ. ಇಲ್ಲಿ ಪ್ರೌಢಶಾಲಾ ವಿದ್ಯಾರ್ಥಿಗಳ ಆಯ್ಕೆಯ ಹಿನ್ನೆಲೆಯಲ್ಲಿ ಯಾವುದಾದರೂ ಒಂದು ವಿಷಯದ ಮೇಲೆ ಲಘುಟಿಪ್ಪಣಿಯನ್ನು ಬರೆಯುವಂತೆ ಸೂಚಿಸಲಾಯಿತು.

ವಿದ್ಯಾರ್ಥಿಗಳು ಬರೆದ ಅನಿರ್ದಿಷ್ಟ ಟಿಪ್ಪಣಿಯನ್ನು ನಲವತ್ತು (೪೦) ಶಬ್ಧಗಳಿಗೆ ಸೀಮಿತಗೊಳಿಸಿಕೊಂಡು ಅದರ ಒಟ್ಟು ದೋಷಗಳನ್ನು C_1, C_2, C_3, C_4, C_5 ಮತ್ತು C_6 ಎಂದು ಪ್ರತ್ಯೇಕಗೊಳಿಸಲಾಗುವುದು. ಇಲ್ಲಿ ವಿದ್ಯಾರ್ಥಿಗಳು ಮಾಡುವ ಒಟ್ಟು ದೋಷಗಳ ಸಂಖ್ಯೆಗಳನ್ನು ಒಟ್ಟು ವಿದ್ಯಾರ್ಥಿಗಳಿಂದ ವಿಭಾಗಿಸಿ ಮತ್ತೆ ನಲವತ್ತು ಶಬ್ಧಗಳಿಂದ ವಿಭಾಗಿಸಿ ಸರಾಸರಿಯನ್ನು ಕಂಡುಕೊಳ್ಳಲಾಯಿತು.

ಹೀಗೆ ಉಕ್ತಲೇಖನದ ಶಬ್ಧಗಳು (A) ವಾಕ್ಯಗಳು (B) ಮತ್ತು ಟಪ್ಪಣಿ (C)ಗಳೆಂದು ಕಾಗುಣಿತ ದೋಷಗಳನ್ನು ವಿಂಗಡಣೆ ಮಾಡಿ ನಗರ ಮತ್ತು ಗ್ರಾಮೀಣ ಪ್ರದೇಶಕ್ಕೆ ಅನ್ವಯಿಸಿದ ಪ್ರೌಢಶಾಲಾ ಮಕ್ಕಳ ದೋಷಗಳನ್ನು ಸಾಮಾಜಿಕವಾಗಿ ಶೈಕ್ಷಣಿಕವಾಗಿ ಮತ್ತು ಆರ್ಥಿಕ ಅನುಕೂಲಗಳ ಹಿನ್ನೆಲೆಯನ್ನು ವಿದ್ಯಾರ್ಥಿ ವಿವರದಿಂದ ಅವರ ಕಾಗುಣಿತದ ಲಿಪಿ-ಚಿಹ್ನೆಗಳಲ್ಲಾಗುವ ದೋಷಗಳನ್ನು ಕಂಡುಕೊಳ್ಳಲಾಯಿತು.

೨. ಕಾಗುಣಿತ ದೋಷಗಳ ಸ್ವರೂಪ ಮತ್ತು ಅವಲೋಕನ

ವಿದ್ಯಾರ್ಥಿಗಳ ಕಾಗುಣಿತ ದೋಷಗಳಿಗೆ ಹಳಗನ್ನಡದ ಕೆಲವು ಅಕ್ಷರಗಳು ಹೊಸಗನ್ನಡದಲ್ಲಿ ಹೆಚ್ಚು ಬಳಕೆಯಲ್ಲಿಲ್ಲ. ಎಂಬ ಅಂಶವನ್ನು ಆಧರಿಸಿದಂತೆ ಮತ್ತು ಅನ್ಯದೇಶಿಯ ಸ್ವೀಕೃತ ಪದಗಳ ಸೇರ್ಪಡೆಯಿಂದ ಹೆಚ್ಚು ಕಾಗುಣಿತ ದೋಷಗಳಾಗುವವು. ಎಂಬ ವಿದ್ವಾಂಸರ ಅಭಿಪ್ರಾಯಗಳ ಹಿನ್ನಲೆಯಲ್ಲಿ ಸಮೀಕ್ಷೆಯನ್ನು ಕೈಗೊಂಡು ಮಾಹಿತಿಯನ್ನು ಕಲೆಹಾಕಲಾಯಿತು.

ಅದನ್ನು ವಿದ್ಯಾರ್ಥಿಗಳ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಅನುಕೂಲಗಳಲ್ಲಿ ಮತ್ತು ದೋಷಗಳ ಪ್ರಕಾರಗಳನ್ನು ವರ್ಗೀಕರಿಸಿದಾಗ ವಿದ್ಯಾರ್ಥಿಗಳು ಯಾವ ಪ್ರಮಾಣದಲ್ಲಿ ದೋಷಗಳನ್ನು ಮಾಡುತ್ತಾರೆ ಎಂಬುವುದು ಅವಲೋಕನದ ಮೂಲಕ ತಿಳಿದು ಬರುತ್ತದೆ.

1. ಲಿಂಗವನ್ನು ಆಧರಿಸಿದಂತೆ ವರ್ಣದೋಷಗಳು

ಲಿಪಿ-ಚಿಹ್ನೆಗಳ ದೋಷಗಳನ್ನು ಕಂಡುಕೊಳ್ಳಲು ಗ್ರಾಮೀಣ ಮತ್ತು ನಗರದ ವಿದ್ಯಾರ್ಥಿಗಳನ್ನು ಗಂಡು ಮತ್ತು ಹೆಣ್ಣು ಎಂದು ವಿಭಾಗಿಸಿ ಅವರ ದೋಷ ಪ್ರಮಾಣವನ್ನು ಕಂಡುಕೊಳ್ಳಲು ಉಕ್ತಲೇಖನದ ಸೂಕ್ತ ಆಯ್ಕೆಯ ೩೦ ಶಬ್ಧರಚನೆ ಮತ್ತು ೭ ವಾಕ್ಯಗಳು ಹಾಗು ೪೦ ಶಬ್ಧಗಳನ್ನಾಧರಿಸಿದ ಲಘುಟಿಪ್ಪಣಿಗಳಲ್ಲಿನ ವಿದ್ಯಾರ್ಥಿಯ ಸರಾಸರಿ ಕಾಗುಣಿತ ದೋಷಗಳನ್ನು ಲೆಕ್ಕಹಾಕಿದಾಗ ಎಲ್ಲಾ ಹಂತದಲ್ಲೂ ಪುರುಷರಿಗಿಂತ ಮಹಿಳೆಯರು ಕಡಿಮೆ ದೋಷಳನ್ನು ಮಾಡಿರುತ್ತಾರೆ.

(ಇದಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿ ಸ್ವ-ವಿವರದ ಸರಾಸರಿ ಪಟ್ಟಿಕೆಯನ್ನು ಕೋಷ್ಟಕ-೨ರಲ್ಲಿ ಗಮನಿಸಿ)

(ಅ) ಗಂಡು ಮಕ್ಕಳ ದೋಷ ಪ್ರಮಾಣ:

ಲಿಂಗವನ್ನಾಧರಿಸಿದಂತೆ ಗಂಡುಮಕ್ಕಳು ಮಾಡಿರುವ ಕಾಗುಣಿತ ದೋಷಗಳ ಸರಾಸರಿಯ ಹಿನ್ನಲೆಯಲ್ಲಿ ಒಬ್ಬ ವಿದ್ಯಾರ್ಥಿಯು ಶಬ್ಧಗಳು, ವಾಕ್ಯಗಳು ಮತ್ತು ಟಿಪ್ಪಣಿಗಳಲ್ಲಿ ಮಾಡಿರುವ ದೋಷ ಪ್ರಮಾಣವನ್ನು ಹಳ್ಳಿ ಮತ್ತು ನಗರದ ಹಿನ್ನೆಲೆಯಲ್ಲಿ ಶಬ್ಧಕ್ಕೆ ಸಂಬಂಧಿಸಿದಂತೆ ೦.೩೩ (ಹಳ್ಳಿ) ಮತ್ತು ೦.೫೦ (ನಗರ)ದ ಪ್ರಮಾಣದಲ್ಲಿ ದೋಷಗಳನ್ನು ಮಾಡಿರುತ್ತಾರೆ.ಅಂದರೆ ಹಳ್ಳಿಯ ಮಕ್ಕಳಿಗಿಂತ ನಗರದ ಗಂಡುಮಕ್ಕಳು ಹೆಚ್ಚು ದೋಷಮಾಡಿರುವುದು ತಿಳಿದುಬರುತ್ತದೆ.

ಅದರಂತೆಯೇ ವಾಕ್ಯಗಳಲ್ಲಿಯೂ ಕೂಡ ಹಳ್ಳಿ ಮತ್ತು ನಗರದ ಗಂಡುಮಗುವಿನ ಸರಾಸರಿ ದೋಷ ಗಮನಿಸಿದರೆ ಇಲ್ಲೂ ನಗರದ ಗಂಡುಮಕ್ಕಳ ದೋಷ ಪ್ರಮಾಣ ಹೆಚ್ಚಾಗಿದೆ. ಹಾಗೆಯೇ ಏಳು ವಾಕ್ಯಗಳಲ್ಲಿನ ಒಟ್ಟು ಮೂವತ್ನಾಲ್ಕು ಶಬ್ಧಗಳಿಗೆ ಸರಾಸರಿ ಕಂಡುಕೊಂಡರೆ ೦.೨೯ (ಹಳ್ಳಿ) ಮತ್ತು ೦.೪೧ (ನಗರ) ರಷ್ಟು ದೋಷ ಪ್ರಮಾಣ ಉಂಟಾಗಿದೆ. ಹಾಗೆಯೇ ಟಿಪ್ಪಣಿ ಬರಹದಲ್ಲಿ ನಗರದ ಗಂಡುಮಕ್ಕಳಿಗಿಂತ ಹಳ್ಳಿಯ ಗಂಡುಮಕ್ಕಳು ಕಡಿಮೆ ಪ್ರಮಾಣದಲ್ಲಿ ದೋಷಗಳಾಗಿವೆ.

(ಆ) ಹೆಣ್ಣುಮಕ್ಕಳ ದೋಷಗಳ ಪ್ರಮಾಣ

ಗ್ರಾಮೀಣ ಮತ್ತು ನಗರಪ್ರದೇಶದ ಒಟ್ಟು ಹೆಣ್ಣು ಮಕ್ಕಳ ಸಮೀಕ್ಷೆಯ ಹಿನ್ನೆಲೆಯಲ್ಲಿ ಕನ್ನಡದ ಕಾಗುಣಿತ ದೋಷಗಳಲ್ಲಿನ ಸರಾಸರಿಯನ್ನು ಕಂಡುಕೊಂಡಾಗ ಗ್ರಾಮೀಣ ಪ್ರದೇಶದ ಹೆಣ್ಣುಮಕ್ಕಳಿಗಿಂತ ನಗರ ಪ್ರದೇಶದ ಹೆಣ್ಣು ಮಗು ಉಕ್ತಲೇಖನದ ಶಬ್ಧಗಳಲ್ಲಿ ಪ್ರತಿಶಬ್ಧಕ್ಕೆ ೦.೨೧ (ಹಳ್ಳಿ) ಮತ್ತು ೦.೪೪ (ನಗರ) ದ ಸರಾಸರಿಯಲ್ಲಿ ದೋಷಗಳನ್ನು ಮಾಡಿರುವುದು ತಿಳಿದು ಬರುತ್ತದೆ. ಹಾಗೆಯೇ ವಾಕ್ಯಗಳ ಬರವಣಿಗೆಯಲ್ಲಿ ೦.೯೫ (ಹಳ್ಳಿ) ಮತ್ತು ೧.೬೫ (ನಗರ) ದ ಸರಾಸರಿಯಲ್ಲಿ ಒಬ್ಬ ಹೆಣ್ಣು ಮಗು ಮಾಡುವ ಸರಾಸರಿ ದೋಷವಾಗಿದೆ. ಅದರಂತೆ ಒಟ್ಟು ವಾಕ್ಯಗಳಲ್ಲಿನ ಪ್ರತಿ ಶಬ್ಧಕ್ಕೆ ೦.೨೧ (ಹಳ್ಳಿ) ಮತ್ತು ೦.೩೪ (ನಗರ) ದ ಪ್ರಮಾಣದಲ್ಲಿ ಕನ್ನಡದ ಕಾಗುಣಿತ ದೋಷಗಳು ಮಾಡಿರುವುದು ತಿಳಿದುಬಂದಿದೆ. ಹಾಗೆಯೇ ಟಿಪ್ಪಣಿಯಲ್ಲಿ ೦.೦೯ ಮತ್ತು ೦.೦೯ ರಷ್ಟು ಸಮಾನ ಅಂತರದಲ್ಲಿ ದೋಷಗಳಾಗಿವೆ. ಹೀಗೆ ಶಬ್ಧರಚನೆಗಿಂತಲೂ ವಾಕ್ಯರಚನೆಯಲ್ಲಿ ಹಳ್ಳಿಯವರಿಗಿಂತ ನಗರದ ಹೆಣ್ಣು ಮಕ್ಕಳು ಅತಿ ಹೆಚ್ಚು ತಪ್ಪುಗಳುಂಟು ಮಾಡುತ್ತಾರೆ.

2. ಪ್ರೌಢಶಾಲಾ ಹಂತದಲ್ಲಿ ತರಗತಿವಾರು ಕಂಡುಬಂದ ದೋಷಗಳು

ವಿದ್ಯಾರ್ಥಿ ಸ್ವ-ವಿವರದ ಕಾಗುಣಿತ ದೋಷಗಳ ಸರಾಸರಿ ಪಟ್ಟಿಕೆಯನ್ನು ವೀಕ್ಷಿಸಿದಾಗ ಎಂಟು, ಒಂಬತ್ತು ಮತ್ತು ಹತ್ತನೇ ತರಗತಿಯ ವಿದ್ಯಾರ್ಥಿಗಳು ಶಬ್ಧಗಳಲ್ಲಿ ಸರಾಸರಿಯ ಹಿನ್ನೆಲೆಯಲ್ಲಿ ಎಂಟು ಮತ್ತು ಹತ್ತನೇ ತರಗತಿಯವರಿಗಿಂತ ಒಂಭತ್ತನೇ ತರಗತಿಯ ಮಕ್ಕಳು ಹೆಚ್ಚು ದೋಷ ಮಾಡುವುದು ತಿಳಿದುಬರುತ್ತದೆ.

ವಾಕ್ಯರಚನೆಯಲ್ಲಿ ಮತ್ತು ವಾಕ್ಯಗಳಲ್ಲಿನ ಪ್ರತಿಶಬ್ಧಕ್ಕೆ ಸರಾಸರಿ ದೋಷಪ್ರಮಾಣ ವೀಕ್ಷಿಸಿದಾಗ ಗ್ರಾಮೀಣ ಶಾಲಾ ಒಂಬತ್ತನೇ ತರಗತಿಯ ದೋಷ ಪ್ರಮಾಣ ಹೆಚ್ಚಾಗಿದೆ. ಆದರೆ ನಗರ ಪ್ರದೇಶದ ಮಕ್ಕಳಲ್ಲಿ ಎಂಟನೇ ತರಗತಿಯ ಮಕ್ಕಳ ದೋಷ ಹೆಚ್ಚಾಗಿದೆ.

ಟಿಪ್ಪಣಿಯಲ್ಲಿನ ೪೦ ಶಬ್ಧಗಳ ಸರಾಸರಿಯ ಹಿನ್ನೆಲೆಯಲ್ಲಿ ಎಂಟನೇ ತರಗತಿಯ ಮಗು ಇತರೆ ತರಗತಿಯವರಿಗಿಂತ ಹೆಚ್ಚು ತಪ್ಪುಗಳನ್ನು ಮಾಡಿರುವುದು ತಿಳಿಯುತ್ತದೆ. ಹೀಗೆ ಸಮೀಕ್ಷೆಯ ಹಿನ್ನೆಲೆಯಲ್ಲಿ ಹಳ್ಳಿಯವರಿಗಿಂತ ನಗರದವರೇ ಅತಿ ಹೆಚ್ಚು ತಪ್ಪುಗಳುಂಟು ಮಾಡಿದ್ದಾರೆ.

3. ಶಿಕ್ಷಣ ಮಾಧ್ಯಮ

ಪ್ರೌಢಶಾಲಾ ಮಕ್ಕಳ ಕನ್ನಡದಲ್ಲಿನ ಕಾಗುಣಿತ ದೋಷಗಳನ್ನು ಕಂಡುಕೊಳ್ಳಲು ಗ್ರಾಮೀಣ ಮತ್ತು ನಗರ ವಲಯಗಳಲ್ಲಿನ ಕನ್ನಡ ಮತ್ತು ಆಂಗ್ಲ ಮಾಧ್ಯಮದ ಶಾಲೆಗಳಲ್ಲಿ ಸಮೀಕ್ಷೆ ನಡೆಸಲಾಯಿತು. ಅವುಗಳಲ್ಲಿ ಸರಾಸರಿ ದೋಷ ಈ ಕೆಳಗಿನಂತಿವೆ.

ಅ) ಕನ್ನಡ ಮಾಧ್ಯಮ

ಕನ್ನಡ ಮಾಧ್ಯಮಕ್ಕೆ ಸಂಬಂಧಿಸಿದ ನಗರ ಮತ್ತು ಗ್ರಾಮೀಣ ವಲಯದ ಪ್ರೌಢಶಾಲಾ ಸಂದರ್ಶನದ ಹಿನ್ನಲೆಯಲ್ಲಿ ಶಬ್ಧಗಳ ಬರವಣಿಗೆಗೆ ಸಂಬಂಧಿಸಿದಂತೆ ೦.೨೯(ಹಳ್ಳಿ) ಮತ್ತು ೦.೩೧ (ನಗರ) ರಷ್ಟು ಸಮಾನ ಪ್ರಮಾಣದ ಆಸುಪಾಸಿನಲ್ಲಿ ದೋಷಗಳಾಗಿವೆ. ಆದರೆ ವಾಕ್ಯಗಳು ಮತ್ತು ವಾಕ್ಯಗಳಲ್ಲಿನ ಪ್ರತೀ ಶಬ್ಧದ ಸರಾಸರಿಯನ್ನು ವೀಕ್ಷಿಸಿದರೆ ನಗರದ ಮಕ್ಕಳಿಗಿಂತ ಗ್ರಾಮೀಣದ ಮಕ್ಕಳಲ್ಲಿ ಹೆಚ್ಚು ತಪ್ಪುಗಳಾಗಿವೆ. ಇದು ವ್ಯತಿರಿಕ್ತವಾದ ಸಂಗತಿ ಇದಕ್ಕೆ ಕಾರಣವೇನು? ಎಂಬುವುದನ್ನು ಖಚಿತಪಡಿಸಿ ಕೊಳ್ಳಬೇಕಾಗಿದೆ.

ಹಾಗೆಯೇ ಟಿಪ್ಪಣಿಗಳ ಸರಾಸರಿಯ ಸಮೀಕ್ಷೆಯಲ್ಲೂ ವ್ಯತಿರಿಕ್ತವಾದ ಪರಿಸ್ಥಿತಿಯೇ ಉಂಟಾಗಿದೆ.

ಅ) ಆಂಗ್ಲಮಾಧ್ಯಮ

ಪ್ರೌಢಶಾಲಾ ಮಕ್ಕಳ ಕನ್ನಡದ ಬಳಕೆಯಲ್ಲಿ ಕಾಗುಣಿತ ದೋಷಗಳ ಮಾಹಿತಿಯನ್ನು ಪಡೆಯಲು ಕೇವಲ ನಗರ ಪ್ರದೇಶವನ್ನು ಮಾತ್ರ ಸೀಮಿತಗೊಳಿಸಿಕೊಳ್ಳಲಾಗಿದೆ. ಆದ್ದರಿಂದ ಇಲ್ಲಿ ಹೆಣ್ಣು ಮತ್ತು ಗಂಡು ಮಕ್ಕಳಲ್ಲಿ ಕಂಡುಬರುವ ದೋಷಗಳ ಪ್ರಮಾಣವನ್ನು ಲೆಕ್ಕಹಾಕಲಾಗಿದೆ. ಇದರ ಮೂಲಕ ಶಬ್ಧಗಳು ಮತ್ತು ವಾಕ್ಯಗಳ ಉಕ್ತಲೇಖನದಲ್ಲಿ ಪುರುಷರಿಗಿಂತಲೂ ಸ್ತ್ರೀಯರು ಕಡಿಮೆ ಪ್ರಮಾಣದ ಸರಾಸರಿಯಲ್ಲಿ ತಪ್ಪು ಮಾಡಿರುವುದು ತಿಳಿಯುತ್ತದೆ. ಆದರೆ ಟಿಪ್ಪಣಿಗಳಲ್ಲಿ ಮಾತ್ರ ವ್ಯತಿರಿಕ್ತವಾದ ಸನ್ನಿವೇಶ ಉಂಟಾಗಿದೆ.

4. ಸಾಮಾಜಿಕ ವರ್ಗಗಳು

ಇಲ್ಲಿ ಸಾಮಾಜಿಕ ವರ್ಗಗಳನ್ನು ಬ್ರಾಹ್ಮಣ, ಲಿಂಗಾಯಿತ/ಒಕ್ಕಲಿಗ ಮತ್ತು ಇತರೇ ಎಂದು ವಿಂಗಡಿಸಲಾಗಿದೆ. ಇದರ ಮೂಲಕ ಪ್ರೌಢಶಾಲಾ ಮಕ್ಕಳ ಕಾಗುಣಿತ ದೋಷಗಳಲ್ಲಿನ ಸರಾಸರಿ ಪ್ರಮಾಣವನ್ನು ಹೆಣ್ಣು-ಗಂಡು, ಹಳ್ಳಿ ಮತ್ತು ನಗರದ ಹಿನ್ನೆಲೆಯಲ್ಲಿ ದೋಷಗಳ ಅಂತರವನ್ನು ಕಂಡುಕೊಳ್ಳಲಾಗಿದೆ.

ಅ) ಬ್ರಾಹ್ಮಣ ವಿದ್ಯಾರ್ಥಿಗಳ ದೋಷ ಪ್ರಮಾಣ

ಸಮಾಜದ ಉನ್ನತ ವರ್ಗವೆಂದು ಕರೆಯಲ್ಪಟ್ಟ ಬ್ರಾಹ್ಮಣ ವಿದ್ಯಾರ್ಥಿಗಳ ಸಮೀಕ್ಷೆಯ ಹಿನ್ನೆಲೆಯಲ್ಲಿ ನಗರ ಪ್ರದೇಶದ ಶಾಲೆಗಳನ್ನು ಮಾತ್ರ ಪರಿಗಣಿಸಿರುವುದರಿಂದ ಇಲ್ಲಿ ಲಿಂಗದ ಆಧಾರದ ಮೇಲೆ ದೋಷ ಪ್ರಮಾಣವನ್ನು ಕಂಡುಕೊಳ್ಳಲಾಗಿದೆ. ಇವರಲ್ಲಿ ಶಬ್ಧ ಮತ್ತು ವಾಕ್ಯಗಳ ಉಕ್ತಲೇಖನಕ್ಕೆ ಸಂಬಂಧಿಸಿದಂತೆ ಗಂಡುಮಕ್ಕಳಿಗಿಂತಲೂ ಹೆಣ್ಣುಮಕ್ಕಳು ಸ್ವಲ್ಪ ಕಡಿಮೆ ಪ್ರಮಾಣದಲ್ಲಿ ದೋಷಮಾಡಿರುವುದು ಕಂಡುಬರುತ್ತದೆ. ಆದರೆ ಟಿಪ್ಪಣಿ ಬರಹದಲ್ಲಿ ಹೆಚ್ಚು-ಕಡಿಮೆ ಸಮಾನ ಅಂತರದ ದೋಷಗಳಾಗಿರುವುದು ತಿಳಿದುಬರುವುದು.

ಆ) ಲಿಂಗಾಯಿತ/ಒಕ್ಕಲಿಗ ವಿದ್ಯಾರ್ಥಿಗಳ ದೋಷ ಪ್ರಮಾಣಗಳು

ಕರ್ನಾಟಕದಲ್ಲಿ ಎರಡನೇ ಸುಶಿಕ್ಷಿತ ವರ್ಗವೆಂದು ಪರಿಗಣಿಸಿದ ಲಿಂಗಾಯಿತ ಮತ್ತು ಒಕ್ಕಲಿಗ ಜಾತಿಯ ಮಕ್ಕಳನ್ನು ಒಂದು ವರ್ಗದಲ್ಲಿಯೇ ಸೇರಿಸಿಕೊಂಡು, ಕನ್ನಡದ ಕಾಗುಣಿತದಲ್ಲಿ ಮಾಡುವ ದೋಷಪ್ರಮಾಣವನ್ನು ಕಂಡುಕೊಳ್ಳಲಾಗಿದ್ದು, ಇವರಲ್ಲಿ ಗ್ರಾಮೀಣದವರಿಗಿಂತಲೂ ನಗರದ ವಿದ್ಯಾರ್ಥಿಗಳೇ ಹೆಚ್ಚು ತಪ್ಪು ಮಾಡಿರುವರು. ಆದರೆ ಈ ವರ್ಗದ ಮಕ್ಕಳ ದೋಷ ಮತ್ತು ಬ್ರಾಹ್ಮಣ ವರ್ಗದ ಮಕ್ಕಳ ದೋಷಗಳಲ್ಲಿ ಹೆಚ್ಚು ಕಡಿಮೆ ಸಮಾನ ಅಂತರದ ದೋಷಗಳಾಗಿರುವುದು ತಿಳಿದುಬರುವುದು.

ಇ) ಇತರೇ ಜಾತಿ ವಿದ್ಯಾರ್ಥಿಗಳ ದೋಷ ಪ್ರಮಾಣಗಳು

ಇಲ್ಲಿ ಬ್ರಾಹ್ಮಣ ಮತ್ತು ಲಿಂಗಾಯಿತ/ಒಕ್ಕಲಿಗ ವಿದ್ಯಾರ್ಥಿಗಳನ್ನು ಹೊರತುಪಡಿಸಿ ಉಳಿದ ಬೇರೆಲ್ಲಾ ಜಾತಿಗೆ ಸೇರಿದ ವಿದ್ಯಾರ್ಥಿಗಳನ್ನು ಇತರೇ ಎಂದು ಪರಿಗಣಿಸಲಾಗಿದೆ. ಈ ವರ್ಗದ ವಿದ್ಯಾರ್ಥಿಗಳು ಶಬ್ಧ ಮತ್ತು ವಾಕ್ಯಗಳ ಉಕ್ತಲೇಖನದಲ್ಲಿ ಮತ್ತು ಟಿಪ್ಪಣಿಗಳಲ್ಲಿ ಕನ್ನಡ ಕಾಗುಣಿತ ದೋಷಗಳ ಸಂಖ್ಯಾವಾರು ಪ್ರಮಾಣವನ್ನು ಲೆಕ್ಕಹಾಕಿ ಸರಾಸರಿ ಕಂಡುಕೊಂಡಾಗ ಹಳ್ಳಿಯವರಿಗಿಂತ ನಗರದ ವಿದ್ಯಾರ್ಥಿಗಳೇ ಹೆಚ್ಚು ದೋಷಗಳುಂಟು ಮಾಡುತ್ತಾರೆ ಎಂಬುದು ತಿಳಿದು ಬರುತ್ತದೆ.

5. ಮನೆಯ ಭಾಷೆ

ಮಾಧ್ಯಮಿಕ ಶಾಲೆಯ ವಿದ್ಯಾರ್ಥಿಗಳ ಶಬ್ದ ಮತ್ತು ವಾಕ್ಯಗಳ ಉಕ್ತಲೇಖನ ಹಾಗು ಟಿಪ್ಪಣಿ ಬರವಣಿಗೆಯ ದೋಷಗಳ ಸಂಖ್ಯೆಗಳನ್ನು ಲೆಕ್ಕಹಾಕಿ ಸರಾಸರಿಯನ್ನು ಗಮನಿಸಿದಾಗ, ಕನ್ನಡ ಮಾತೃಭಾಷೆ ಹೊಂದಿರುವ ಮತ್ತು ಇತರೇ (ತಮಿಳು, ತೆಲುಗು, ತುಳು, ಉರ್ದು ಇತ್ಯಾದಿ) ಮಾತೃಭಾಷೆ ಹೊಂದಿರುವ ವಿದ್ಯಾರ್ಥಿಗಳಲ್ಲಿ ಹಳ್ಳಿಯವರಿಗಿಂತ ನಗರ ಶಾಲೆಯ ಮಕ್ಕಳೇ ಹೆಚ್ಚು ಪ್ರಮಾಣದಲ್ಲಿ ಕಾಗುಣಿತ ದೋಷ ಮಾಡುವರೆಂದು ತಿಳಿದು ಬರುತ್ತದೆ.

6. ಆರ್ಥಿಕ ವರ್ಗ/ಹಿನ್ನೆಲೆ

ಆರ್ಥಿಕ ಅನುಕೂಲತೆಯನ್ನು ಸ್ಥೂಲವಾಗಿ ಕಾರು(E1) ಹೊಂದಿರುವ ಮಕ್ಕಳು, ದ್ವಿಚಕ್ರವಾಹನ (E2) ಹೊಂದಿರುವ ಮಕ್ಕಳು ಮತ್ತು ಇವುಗಳ ಅನುಕೂಲ ಗಳಿಲ್ಲದಿರುವವರನ್ನು ಇತರೇ (E3)ಎಂದು ಪರಿಗಣಿಸಿ ಅವರ ಬರಹದಲ್ಲಿ ಕಂಡುಬರುವ ಕಾಗುಣಿತ ದೋಷಗಳ ಪ್ರಮಾಣವನ್ನು ಲೆಕ್ಕಹಾಕಿದಾಗ ಶಬ್ಧಗಳಲ್ಲಿ ದ್ವಿಚಕ್ರವಾಹನ ಮತ್ತು ಇತರೇ ಮಕ್ಕಳಿಗಿಂತ ಕಾರು ಹೊಂದಿರುವ ಹಳ್ಳಿ ಮಕ್ಕಳು ಅತಿ ಹೆಚ್ಚು ತಪ್ಪು ಮಾಡುತ್ತಾರೆ. ನಗರ ಪ್ರದೇಶದಲ್ಲಿ ಕಾರು ಮತ್ತು ದ್ವಿಚಕ್ರವಾಹನದವರಿಗಿಂತ ಇತರೇ ಮಕ್ಕಳ ದೋಷ ಪ್ರಮಾಣ ಹೆಚ್ಚಾಗಿ ಕಂಡುಬರುತ್ತದೆ.

ಅದರಂತೆಯೇ ವಾಕ್ಯಗಳಲ್ಲಿ ಮತ್ತು ವಾಕ್ಯಗಳಲ್ಲಿನ ಪ್ರತಿಶಬ್ಧದ ಸರಾಸರಿಯನ್ನು ವೀಕ್ಷಿಸಿದಾಗ ಹಳ್ಳಿಯವರಿಗಿಂತ ನಗರ ಶಾಲೆಯ ಮಕ್ಕಳೇ ಅಧಿಕ ದೋಷಗಳನ್ನು ಮಾಡಿರುವುದು ತಿಳಿದುಬರುತ್ತದೆ.

ಟಿಪ್ಪಣಿ ಬರವಣಿಗೆಯ ಸರಾಸರಿಯಲ್ಲಿ ಹಳ್ಳಿಯವರಿಗಿಂತ ನಗರದವರ ದೋಷ ಪ್ರಮಾಣ ಹೆಚ್ಚುಕಡಿಮೆ ಸಮಾನ ಅಂತರದಲ್ಲಿರುವುದು ತಿಳಿದು ಬರುತ್ತದೆ.

೩. ಕಾಗುಣಿತ ದೋಷಗಳ ಪ್ರಕಾರಗಳ ವರ್ಗೀಕರಣ

ವಿದ್ಯಾರ್ಥಿಗಳು ಮಾಡಿರುವ ಕಾಗುಣಿತ ದೋಷಗಳನ್ನು ಉಕ್ತಲೇಖನದ ಶಬ್ದಗಳು, ಉಕ್ತಲೇಖನದ ವಾಕ್ಯಗಳು ಮತ್ತು ಟಿಪ್ಪಣಿಗದಳಲ್ಲಿನ ಶಬ್ಧಗಳ ಒಟ್ಟು ದೋಷಗಳನ್ನು ಲೆಕ್ಕಹಾಕಲಾಗಿದೆ. ಅವುಗಳನ್ನು ಹಳ್ಳಿಮತ್ತು ನಗರದ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳು ಮಾಡಿರುವ ಒಟ್ಟುದೋಷಗಳ ಸಂಖ್ಯೆಗಳನ್ನು ಹ್ರಸ್ವಸ್ವರ- ದೀರ್ಘಸ್ವರದಲ್ಲಿನ ದೋಷಗಳು,

ಶ, ಷ, ಸ ಗಳಲ್ಲಿನ ದೋಷಗಳು, ಅಕಾರಾದಿ-ಸ್ವರಾದಿಗಳಲ್ಲಿನ ದೋಷಗಳು, ಅಲ್ಪಪ್ರಾಣ-ಮಹಾಪ್ರಾಣದ ದೋಷಗಳು, ಒತ್ತಕ್ಷರಗಳಿಗೆ ಸಂಬಂಧಿಸಿದಂತೆ ಮತ್ತು ಇತರೇ ದೋಷಗಳನ್ನು ಒಟ್ಟು ಸಂಖ್ಯೆಗಳಲ್ಲಿ ಕೊಡಲಾಗಿದೆ. ಅವುಗಳ ಕೆಳಗಡೆ ಆವರಣದಲ್ಲಿ ವಿದ್ಯಾರ್ಥಿಗಳ ಒಟ್ಟು ಸಂಖ್ಯೆ ಇದೆ.

ಇಲ್ಲಿ ವಿದ್ಯಾರ್ಥಿಗಳು ಹಳ್ಳಿ ಮತ್ತು ನಗರಕ್ಕೆ ಸಂಬಂಧಿಸಿದಂತೆ ಸಮಾನ ಅಂತರದಲ್ಲಿರುವುದರಿಂದ ಅವರ ದೋಷಗಳನ್ನು ಸರಾಸರಿ ಹಿನ್ನೆಲೆಯಲ್ಲಿ ಲೆಕ್ಕಹಾಕದೇ ಹಾಗೆಯೇ ಒಟ್ಟು ಸಂಖ್ಯೆಗಳ ದೋಷಗಳನ್ನು ಕೊಡಲಾಗಿದೆ. (ಇದಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಕೋಷ್ಟಕ-೪ನ್ನು ಗಮನಿಸಿ)

ಕೋಷ್ಟಕ-೪ : ಕಾಗುಣಿತ ದೋಷಗಳ ಪ್ರಕಾರಗಳ ಪಟ್ಟಿ

ಕ್ರ.ಸಂ.	ಕಾಗುಣಿತ ದೋಷಗಳು	ಶಬ್ದಗಳು		ವಾಕ್ಯಗಳು		ಟಿಪ್ಪಣಿ	
		ಹಳ್ಳಿ	ನಗರ	ಹಳ್ಳಿ	ನಗರ	ಹಳ್ಳಿ	ನಗರ
1	ಹ್ರಸ್ವಸ್ವರ - ದೀರ್ಘಸ್ವರ	A_1 275 (84)	A_1 382 (83)	B_1 308 (84)	B_1 375 (83)	C_1 170 (84)	C_1 147 (83)
2.	ಶ,ಷ, ಸ	A_2 22	A_2 71	B_2 53	B_2 81	C_2 2	C_2 27
3.	‘ಅ’ಕಾರಾದಿ-‘ಸ್ವ’ರಾದಿ	A_3 67	A_3 49	B_3 31	B_3 49	C_3 17	C_3 10
4.	ಅಲ್ಪಪ್ರಾಣ-ಮಹಾಪ್ರಾಣ	A_4 167	A_4 246	B_4 80	B_4 156	C_4 24	C_4 31
5.	ಒತ್ತಕ್ಷರಗಳು	A_5 77	A_5 173	B_5 99	B_5 173	C_5 65	C_5 97
6.	ಇತರೇ	A_6 109	A_6 258	B_6 139	B_6 240	C_6 80	C_6 103

ಈ ಮೇಲಿನ ಕೋಷ್ಟಕದಲ್ಲಿನ ವಿದ್ಯಾರ್ಥಿಗಳ ಕಾಗುಣಿತ ದೋಷಗಳನ್ನು ಶಬ್ದಗಳು (A) ಮತ್ತು ವಾಕ್ಯಗಳು (B) ಮತ್ತು ಟಿಪ್ಪಣಿಗಳು (C) ಎಂದು ಪ್ರತ್ಯೇಕಿಸಿ ಹಳ್ಳಿ ಮತ್ತು ನಗರದ ಹಿನ್ನೆಲೆಯಲ್ಲಿ ಕಂಡುಬರುವ ದೋಷಗಳನ್ನು ಹ್ರಸ್ವಸ್ವರ-ದೀರ್ಘಸ್ವರ, ಶ, ಷ, ಸ, 'ಅ'ಕಾರಾದಿ-'ಸ್ವ'ರಾದಿ, ಅಲ್ಪಪ್ರಾಣ-ಮಹಾಪ್ರಾಣ, ಒತ್ತಕ್ಷರಗಳು ಮತ್ತು ಇತರೇ ಎಂದು ಪ್ರತ್ಯೇಕಗೊಳಿಸಿ ಶಬ್ದಗಳಲ್ಲಿ ಮಾಡುವ ದೋಷಗಳನ್ನು A_1 ಯಿಂದ A_6 ವರೆಗೆ ಎಲ್ಲಾ ಹಳ್ಳಿ ಮತ್ತು ನಗರದ ವಿದ್ಯಾರ್ಥಿಗಳ ದೋಷಗಳನ್ನು ಕೊಡಲಾಗಿದೆ. ಅವುಗಳ ಕೆಳಗಡೆ ಹಳ್ಳಿಯ ೮೪ ವಿದ್ಯಾರ್ಥಿಗಳು ಮತ್ತು ನಗರದ ೮೩ ವಿದ್ಯಾರ್ಥಿಗಳೆಂದು ಆವರಣದಲ್ಲಿ ಸೂಚಿಸಲಾಗಿದೆ.

ಅದೇ ರೀತಿ ವಾಕ್ಯಗಳಲ್ಲಿ ಮಾಡುವ ದೋಷಗಳನ್ನು B_1 ಯಿಂದ B_6 ವರೆಗೆ ಟಿಪ್ಪಣಿಗಳಲ್ಲಿ ಮಾಡುವ ದೋಷಗಳನ್ನು C_1 ಯಿಂದ C_6 ವರೆಗೆ ಎಲ್ಲಾ ಹಳ್ಳಿ ಮತ್ತು ನಗರದ ವಿದ್ಯಾರ್ಥಿಗಳ ದೋಷಗಳ ಸಂಖ್ಯೆಗಳನ್ನು ಸೂಚಿಸುತ್ತದೆ. ಅವುಗಳ ಕೆಳಗೆ ಹಳ್ಳಿಯ ೮೪ ವಿದ್ಯಾರ್ಥಿಗಳು ಮತ್ತು ೮೩ ವಿದ್ಯಾರ್ಥಿಗಳ ಸಂಖ್ಯೆಯನ್ನು ಆವರಣದ ಮೂಲಕ ಸೂಚಿಸಲಾಗಿದೆ.

1. ಕಾಗುಣಿತ ದೋಷಗಳ ವಿವರಣೆ

ಉಕ್ತಲೇಖನದ ಶಬ್ದಗಳು, ವಾಕ್ಯಗಳು ಮತ್ತು ಟಿಪ್ಪಣಿಗಳಲ್ಲಿ ಮಾಡುವ ದೋಷಗಳನ್ನು ದೇಶೀಯ ಮತ್ತು ಅನ್ಯದೇಶಿಯ ರೂಪಗಳೆಂದು ಸೂಕ್ತವಾಗಿ ಲಿಪಿ-ಚಿಹ್ನೆಗಳಲ್ಲಿ ಅಳವಡಿಸಿಕೊಳ್ಳಲಾಗಿದೆ. ಇವುಗಳಲ್ಲಿ ಹಳ್ಳಿ ಮತ್ತು ನಗರ ಪ್ರೌಢಶಾಲೆಯ ವಿದ್ಯಾರ್ಥಿಗಳು ಮಾಡುವ ಒಟ್ಟು ದೋಷಗಳನ್ನು ಸಂಕೇತಿಸಲಾಗಿದೆ.

ಅ) ಹ್ರಸ್ವಸ್ವರ-ದೀರ್ಘಸ್ವರದ ದೋಷಗಳು

'ಒಂದು ಮಾತ್ರೆಯ ಕಾಲದಲ್ಲಿ ಉಚ್ಚರಿಸುವ ಸ್ವರಗಳಿಗೆ ಹ್ರಸ್ವಸ್ವರ ಎಂದು, ಹಾಗೆಯೇ ಎರಡು ಮಾತ್ರೆಯ ಕಾಲದಲ್ಲಿ ಉಚ್ಚರಿಸುವ ಸ್ವರಗಳಿಗೆ ದೀರ್ಘಸ್ವರ' ಎನ್ನಲಾಗಿದೆ. ಉದಾ: ಕೆಡು-ಕೇಡು, ಬಿಡು-ಬೀಡು ಇತ್ಯಾದಿಯಾಗಿ ಹೃಸ್ವಸ್ವರ-ದೀರ್ಘಸ್ವರಗಳು ಅರ್ಥವ್ಯತ್ಯಾಸಕ್ಕೆ ಕಾರಣವಾಗುತ್ತವೆ.

ಇವುಗಳಲ್ಲಿ ಕಂಡುಬರುವ ಕಾಗುಣಿತ ದೋಷಗಳನ್ನು ಮಾಧ್ಯಮಿಕ ಶಾಲೆಯ ವಿದ್ಯಾರ್ಥಿಗಳಿಂದ ಬರೆಸಿದ ಶಬ್ದಗಳು ಮತ್ತು ವಾಕ್ಯಗಳನ್ನು ಆಯ್ಕೆಯ ಹಿನ್ನೆಲೆಯಲ್ಲಿ

ಕಲೆಹಾಕುವುದರ ಮೂಲಕ ಹಾಗೆಯೇ ವಿದ್ಯಾರ್ಥಿಗಳಿಂದ ಸ್ವಂತವಾಗಿ ಬರೆದ ಟಿಪ್ಪಣಿಗಳನ್ನು ೪೦ಶಬ್ಧಗಳಿಂದ ಲೆಕ್ಕಹಾಕಿದಾಗ ಗ್ರಾಮೀಣ ಪ್ರದೇಶದ ಮಕ್ಕಳಿಗಿಂತ ನಗರ ಪ್ರದೇಶದ ಮಕ್ಕಳು ಅತಿ ಹೆಚ್ಚಿನ ಪ್ರಮಾಣದಲ್ಲಿ ತಪ್ಪುಗಳನ್ನು ಮಾಡುತ್ತಾರೆಂಬುದು ತಿಳಿದುಬಂದಿದೆ. (ಇದಕ್ಕೆ ಸಂಬಂಧಿಸಿದಂತೆ ಕೋಷ್ಟಕ-೪ರಲ್ಲಿ ಕೊಟ್ಟಿರುವ ಪಟ್ಟಿಕೆಯನ್ನು ಗಮನಿಸಿ)

ಆ) ಶ, ಷ, ಸ ಗಳ ಕಾಗುಣಿತ ದೋಷಗಳು

ಸಂಸ್ಕೃತ ಮೂಲದ ವರ್ಣಗಳಾದ ಶ, ಷ, ಗಳ ವರ್ಣಗಳನ್ನು ಎಲ್ಲಿ ಬಳಸಬೇಕೆಂಬ ವಿಷಯದಲ್ಲಿ ಅನೇಕರಿಗೆ ಸಂದೇಹವಾಗಿರುವ ಹಿನ್ನೆಲೆಯಲ್ಲಿ ಇವುಗಳಿಗೆ ಸಂಬಂಧಿಸಿದ ಉಕ್ತಲೇಖನದ ಶಬ್ಧ ಮತ್ತು ವಾಕ್ಯಗಳು ಹಾಗೂ ಟಿಪ್ಪಣಿಗಳಲ್ಲಿನ ದೋಷಗಳನ್ನು ಕಂಡುಕೊಂಡಾಗ ಹಳ್ಳಿ ಮತ್ತು ನಗರದ ವಿದ್ಯಾರ್ಥಿಗಳಲ್ಲಿ ದೋಷಗಳು ಶಬ್ಧಗಳಿಗಿಂತ ವಾಕ್ಯಗಳಲ್ಲಿ ಹೆಚ್ಚಾಗಿರುವುದು ಕಂಡುಬರುತ್ತದೆ. ಹಾಗೆಯೇ ಟಿಪ್ಪಣಿ, ಶಬ್ಧ ಮತ್ತು ವಾಕ್ಯಗಳಲ್ಲಿ ಹಳ್ಳಿಯ ವಿದ್ಯಾರ್ಥಿಗಳಿಗಿಂತ ನಗರದ ವಿದ್ಯಾರ್ಥಿಗಳು ಅತಿ ಹೆಚ್ಚು ತಪ್ಪುಮಾಡಿರುವುದು ತಿಳಿದುಬರುತ್ತದೆ. ಆದರೆ ಶ, ಷ, ಸಗಳ ಕಾಗುಣಿತ ದೋಷಗಳು ಇತರೆ ದೋಷಗಳಿಗಿಂತ ಬಹಳ ಕಡಿಮೆ ಪ್ರಮಾಣದಲ್ಲಿವೆ.

ಇ) 'ಅ'ಕಾರಾದಿ -'ಸ್ವ'ರಾದಿ ಕಾಗುಣಿತ ದೋಷಗಳು

ಕನ್ನಡದಲ್ಲಿ 'ಅ'ಕಾರಾದಿ-'ಸ್ವ'ರಾದಿಗಳ ಬಳಕೆ ಪರ್ಯಾಯವಾದ ಸಾಮಾಜಿಕ ವ್ಯತ್ಯಾಸವನ್ನು ಹೇಳುವಂಥದಾಗಿದ್ದು, ಬರಹರೂಪದಲ್ಲಿಯೂ ಕಾಣಿಸಿಕೊಳ್ಳುತ್ತದೆ. ಹಾಗೂ ಮಹಾಪ್ರಾಣದ ಅಕ್ಷರಗಳ ಬಳಕೆಯಲ್ಲಿಯಂತೆ ಅನೇಕರಿಗೆ ಇವುಗಳಲ್ಲಿಯೂ ಬಳಕೆಯ ಗೊಂದಲಕ್ಕೆ ಕಾರಣವಾಗಿರುವುದನ್ನು ಮನಗಂಡು ಇದರಲ್ಲಿ ಕಂಡುಬರುವ ದೋಷಗಳು ಉತ್ಸಾಹದ ಅತಿರೇಕದಿಂದ ಮತ್ತು ಸಂದೇಹಾಸ್ಪದವಾಗಿ ಇವುಗಳನ್ನು ಅದಲುಬದಲು ಮಾಡಿ ಬರೆಯುವುದುಂಟು.

ಸಾಮಾನ್ಯವಾಗಿ ಪದಗಳ ಆರಂಭದಲ್ಲಿ ಈ ದೋಷಗಳು ಹೆಚ್ಚಾಗಿ ಸಂಭವಿಸುತ್ತದೆ. ಉದಾಹರಣೆಗೆ: ಅರಿ-ಹರಿ, ಆಡು-ಹಾಡು, ಅಕ್ಕಿ-ಹಕ್ಕಿ, ಅರಿಶಿನ-ಹರಿಶಿನ, ಅನುಯಾಯಿ-ಹನುಯಾಯಿ, ಹಪ್ಪಳ-ಅಪ್ಪಳ ಇತ್ಯಾದಿಯಾಗಿ ಅನೇಕ ದೋಷಗಳು ಕಂಡುಬರುತ್ತವೆ. ಅದರಲ್ಲೂ ಮಕ್ಕಳು 'ಹ'ಕಾರಕ್ಕೆ 'ಅ'ಕಾರ ಬಳಸುವುದು ತೀರಾ ಸಾಮಾನ್ಯವಾಗಿದೆ.

ಇದರ ಹಿನ್ನೆಲೆಯಲ್ಲಿ ನಗರ ಮತ್ತು ಗ್ರಾಮೀಣ ಪ್ರದೇಶದ ಪ್ರೌಢಶಾಲಾ ಮಕ್ಕಳಲ್ಲಿ ಗ್ರಾಮೀಣ ಪ್ರದೇಶದ ಮಕ್ಕಳು ಶಬ್ಧಗಳಲ್ಲಿ ಮತ್ತು ಟಿಪ್ಪಣಿಗಳಲ್ಲಿ ಹೆಚ್ಚು ತಪ್ಪು ಮಾಡಿರುವುದು ತಿಳಿದುಬಂದಿದೆ. ಆದರೆ ವಾಕ್ಯಗಳಲ್ಲಿ ಮಾತ್ರ ವ್ಯತಿರಿಕ್ತವಾದ ಸನ್ನಿವೇಶವಾಗಿದೆ. ಇದಕ್ಕೆ ಸಂಬಂಧಿಸಿದಂತೆ ಹಳ್ಳಿಯ ಮಕ್ಕಳು ಪ್ರಾದೇಶಿಕ ಹಿನ್ನೆಲೆಯಿಂದಾಗಿ ಮತ್ತು ಆಡುನುಡಿಯ ದಟ್ಟವಾದ ಪ್ರಭಾವದಿಂದಾಗಿ ಈ ದೋಷಕಂಡುಬರಬಹುದಾದರೂ ಇದಕ್ಕೆ ಮೂಲಕಾರಣವೇನು ? ಎಂಬುವುದನ್ನು ಖಚಿತವಾಗಿ ತಿಳಿದುಕೊಳ್ಳಬೇಕಾಗಿದೆ.

ಈ) ಅಲ್ಪಪ್ರಾಣ-ಮಹಾಪ್ರಾಣದ ಕಾಗುಣಿತ ದೋಷಗಳು

'ಅಲ್ಪಪ್ರಾಣಗಳು ಕಡಿಮೆ ಉಸಿರಿನಿಂದ ಉಚ್ಚರಿಸುವ ವ್ಯಂಜನಾಕ್ಷರಗಳಾದರೆ, ಮಹಾಪ್ರಾಣಗಳು ಹೆಚ್ಚು ಉಸಿರಿನಿಂದ ಉಚ್ಚರಿಸುವ ವ್ಯಂಜನಾಕ್ಷರಗಳಾಗಿವೆ.' ಉದಾ: ದನ-ಧನ, ಮದ್ಯ-ಮಧ್ಯ, ಇತ್ಯಾದಿ ಅಲ್ಪಪ್ರಾಣ-ಮಹಾಪ್ರಾಣಗಳನ್ನು ಎಲ್ಲಿ ಬಳಸಬೇಕೆಂಬುವುದರಲ್ಲಿ ಸಾಕಷ್ಟು ಸಂದೇಹವಿದೆ. ಏಕೆಂದರೆ ಈ ಅಕ್ಷರಗಳಿರುವ ಪದಗಳನ್ನು ಉಚ್ಚರಿಸುವಾಗ ಹೆಚ್ಚಿನವರು ಅದನ್ನು (ವಿಧಾನಸಭೆ ಎಂಬುದು ವಿದಾನಸಬೆ) ಗೊಂದಲಮಯವಾಗಿಯೇ ಉಚ್ಚರಿಸುತ್ತಾರೆ. ಈ ಹಿನ್ನೆಲೆಯಲ್ಲಿ ಪ್ರೌಢಶಾಲಾ ಮಕ್ಕಳಿಂದ ಮಾಹಿತಿಯನ್ನು ಸಂಗ್ರಹಿಸಿದಾಗ ಉಕ್ತಲೇಖನದ ಶಬ್ಧಗಳು ಮತ್ತು ವಾಕ್ಯಗಳಲ್ಲಿ ಹಾಗೆಯೇ ಟಿಪ್ಪಣಿಗಳಲ್ಲಿ ಗ್ರಾಮೀಣವಲಯದ ವಿದ್ಯಾರ್ಥಿಗಳಿಗಿಂತ ನಗರ ವಲಯದ ವಿದ್ಯಾರ್ಥಿಗಳೇ ಅತಿ ಹೆಚ್ಚಿನ ಪ್ರಮಾಣದಲ್ಲಿ ದೋಷಗಳುಂಟು ಮಾಡುತ್ತಾರೆ ಎಂಬುದು ಗೊತ್ತಾಗುತ್ತದೆ.

ಇಲ್ಲಿ ವಾಕ್ಯಗಳು ಮತ್ತು ಟಿಪ್ಪಣಿಗಳಿಗಿಂತ ಶಬ್ಧಗಳಲ್ಲಿ ಅತಿ ಹೆಚ್ಚು ತಪ್ಪುಮಾಡಿರುವುದು ಖಚಿತವಾಗಿದೆ.

ಉ) ಒತ್ತಕ್ಷರಗಳಲ್ಲಿನ ದೋಷಗಳು

ಕನ್ನಡದ ಲಿಪಿ-ಚಿಹ್ನೆಗಳಲ್ಲಿ ಸ್ವೀಕೃತ ಭಾಷೆಯನ್ನು ಅಳವಡಿಸಿಕೊಂಡಿರುವುದರ ಹಿನ್ನೆಲೆಯಲ್ಲಿ ಆಯ್ದ ಶಬ್ದಗಳು, ವಾಕ್ಯಗಳು ಮತ್ತು ಟಿಪ್ಪಣಿಗಳಲ್ಲಿನ ಬರಹದ ಮೂಲಕ ಮಾಹಿತಿಯನ್ನು ಸಂಗ್ರಹಿಸಿದಾಗ ಗ್ರಾಮೀಣಕ್ಕಿಂತ ನಗರದ ಪ್ರೌಢಶಾಲೆಯ ಮಕ್ಕಳ ಬರವಣಿಗೆಯಲ್ಲಿ ಹೆಚ್ಚು ತಪ್ಪುಗಳಾಗುತ್ತವೆ ಎಂದು ತಿಳಿದು ಬರುತ್ತದೆ. ಇಲ್ಲಿ ಹಳ್ಳಿಯ ಮಕ್ಕಳಿಗಿಂತ ನಗರದ ಮಕ್ಕಳು ಅರ್ಧಕ್ಕಿಂತ ಹೆಚ್ಚು ತಪ್ಪುಮಾಡಿರುವುದು ತಿಳಿದುಬರುತ್ತದೆ.

ಕನ್ನಡ ಭಾಷೆಯಲ್ಲಿನ ಅಕ್ಷರ ಮತ್ತು ಪದಗಳು ಸುಸಂಬದ್ಧವಾಗಿ ಜೋಡಿಸಲ್ಪಟ್ಟರೂ ಕೆಲವು ಸಂದರ್ಭದಲ್ಲಿ ಒತ್ತಕ್ಷರದ ಲಿಪಿ-ಚಿಹ್ನೆಗಳನ್ನು ಸುಸಂಬದ್ಧವಾಗಿ ಅಳವಡಿಸಿಕೊಂಡಿರುವುದಿಲ್ಲ. ಇಲ್ಲಿ ಒತ್ತಕ್ಷರಗಳು ದ್ವಿತ್ವ ಮತ್ತು ಸಂಯುಕ್ತದ್ವಿತ್ವಗಳಿಗೆ ಮಾತ್ರ ಆಧರಿಸಿವೆ. ಉದಾ: ಹಪ್ಪಳ (ದ್ವಿತ್ವ) ಸರ್ಕಾರ (ಸಂಯುಕ್ತ ದ್ವಿತ್ವ) ಇತ್ಯಾದಿ.

ಉ) ಇತರೇ ದೇಶೀಯ ವರ್ಣದೋಷಗಳ ಬಳಕೆ

ಇತರೇ ದೇಶೀಯ ವರ್ಣ ದೋಷಗಳೆಂಬುವುದು ಉಕ್ತಲೇಖನದ ಶಬ್ದಗಳು, ವಾಕ್ಯಗಳು ಮತ್ತು ಟಿಪ್ಪಣಿಗಳ ಬರಹದಲ್ಲಿ ಪ್ರೌಢಶಾಲಾ ಮಕ್ಕಳು ಒಂದು ಅಕ್ಷರದ ಬದಲಿಗೆ ಬೇರೊಂದನ್ನು ಬರೆದದ್ದು, ಇಲ್ಲವೆ ಅನವಶ್ಯಕವಾಗಿ ಬೇರೊಂದು ವರ್ಣಸೇರಿಸಿರುವುದು. ಉದಾ : ಮರವನ್ನು ಎಂಬುವುದನ್ನು ಮರಗನ್ನು, ಮಗನ್ನು ಎಂದು ಬಳಸಿರುವುದು.

ಈ ಹಂತದಲ್ಲಿ ಗ್ರಾಮೀಣ ಶಾಲಾ ವಿದ್ಯಾರ್ಥಿಗಳಿಗಿಂತ ನಗರದ ವಿದ್ಯಾರ್ಥಿಗಳು ಹೆಚ್ಚಿನ ಪ್ರಮಾಣದಲ್ಲಿ ದೋಷ ಮಾಡಿರುವುದು ದೃಢಪಟ್ಟಿದೆ. ಇಲ್ಲಿ ನಗರದವರು ಅತಿ ಹೆಚ್ಚಿನ ಪ್ರಮಾಣದಲ್ಲಿ ತಪ್ಪುಗಳುಂಟುಮಾಡುವುದು ಗೋಚರಿಸುತ್ತದೆ.

ಅಧ್ಯಾಯ - ನಾಲ್ಕು

ಕನ್ನಡದಲ್ಲಿ ಕಾಗುಣಿತ ದೋಷಗಳನ್ನು ಕುರಿತ ವಿವೇಚನೆ

ಅಧ್ಯಾಯ-೪

೧. ಕನ್ನಡದಲ್ಲಿನ ಕಾಗುಣಿತ ದೋಷಗಳನ್ನು ಕುರಿತ ವಿವೇಚನೆ

ಎಲ್ಲಾ ಭಾಷಗಳ ಲಿಪಿ-ಚಿಹ್ನೆಗಳಲ್ಲಿ ದೋಷಗಳು ಕಂಡುಬರುವಂತೆ ಕನ್ನಡದ ಬಳಕೆಯಲ್ಲೂ ಲಿಪಿ-ಚಿಹ್ನೆಗಳ ಕಾಗುಣಿತ ದೋಷಗಳು ಎಲ್ಲರಲ್ಲೂ ಒಂದಲ್ಲ ಒಂದು ಬಗೆಯಲ್ಲಿ ಆಗುತ್ತವೆ. ಆದರೆ ಈ ಸಂಪ್ರಬಂಧದಲ್ಲಿ ಪ್ರೌಢಶಾಲೆಯ ಮಕ್ಕಳನ್ನು ಮಾತ್ರ ಸೀಮಿತವಾಗಿ ಅಧ್ಯಯನ ಮಾಡಲಾಗಿದೆ. ಇದರಲ್ಲಿ ಹಳ್ಳಿ ಮತ್ತು ನಗರದ ಪ್ರೌಢಶಾಲೆಗಳನ್ನು ಕೇಂದ್ರೀಕರಿಸಿಕೊಂಡು ವಿದ್ಯಾರ್ಥಿಗಳ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಮತ್ತು ಪ್ರಾದೇಶಿಕ ಹಿನ್ನೆಲೆಯಲ್ಲಿ ಸಮೀಕ್ಷೆಯನ್ನು ಕೈಗೊಳ್ಳಲಾಗಿದೆ. ಇದರ ಮೂಲಕ ವಿದ್ಯಾರ್ಥಿಗಳು ಉಕ್ತಲೇಖನದ ವಾಕ್ಯಗಳು, ಉಕ್ತಲೇಖನದ ಶಬ್ಧಗಳು ಮತ್ತು ಟಿಪ್ಪಣಿ ಬರಹದಲ್ಲಿ ಮಾಡಿರುವ ದೋಷಗಳನ್ನು ಕಲೆಹಾಕಿ ಒಟ್ಟು ದೋಷಗಳ ಸಂಖ್ಯೆಗಳನ್ನು ಲೆಕ್ಕಹಾಕಿ ಸರಾಸರಿಯನ್ನು ಕಂಡುಕೊಂಡಾಗ ವಿದ್ಯಾರ್ಥಿ ಹಿನ್ನೆಲೆಯಲ್ಲಿನ ದೋಷಗಳ ಪ್ರಮಾಣ ತಿಳಿದುಬಂದಿದೆ.

ಅದರಲ್ಲಿ ಉಕ್ತಲೇಖನದ ಶಬ್ಧಗಳು (ಹಿಂದೆ ಕೊಟ್ಟ ಕೋಷ್ಟಕದಲ್ಲಿ 'A' ವಿಭಾಗ) ಉಕ್ತಲೇಖನದ ವಾಕ್ಯಗಳಲ್ಲಿನ ಪ್ರತಿ ಶಬ್ಧಗಲು (ಹಿಂದೆ ಕೊಟ್ಟ ಕೋಷ್ಟಕದಲ್ಲಿ 'B' ವಿಭಾಗ) ಮತ್ತು ಲಘು ಟಿಪ್ಪಣಿಗಳಲ್ಲಿನ (..'C' ವಿಭಾಗ) ಸರಾಸರಿಯಲ್ಲಿ ಉಕ್ತಲೇಖನದ ಶಬ್ಧಗಳಿಗಿಂತ(A) ಉಕ್ತಲೇಖನದ ವಾಕ್ಯಗಳ ಶಬ್ಧದಲ್ಲಿ(B) ಕಡಿಮೆ ಪ್ರಮಾಣದ ದೋಷಗಳು ಕಂಡುಬರುತ್ತದೆ. ಆದರೆ ಟಿಪ್ಪಣಿಗಳ (C) ಸ್ವಂತ ಬರವಣಿಗೆಯ ಶಬ್ಧಗಳಲ್ಲಿ ಕಾಗುಣಿತ ದೋಷಗಳ ಪ್ರಮಾಣ (A, B ವಿಭಾಗಗಳಿಗಿಂತ) ತೀರಾ ಕಡಿಮೆಯಾಗಿರುತ್ತವೆ. ಇದಕ್ಕೆ ಕಾರಣವೇನಿರಬಹುದು? ಎಂಬುದನ್ನು ಕಂಡುಕೊಳ್ಳಬೇಕಾಗಿದೆ.

ಉಕ್ತಲೇಖನದ ಶಬ್ಧಗಳು ಮತ್ತು ವಾಕ್ಯಗಳನ್ನು ಉಚ್ಚಾರಣೆ ಮಾಡಿ ಹೇಳುವಾಗ ವಿದ್ಯಾರ್ಥಿಗಳ ಕೇಳಿಸುವಿಕೆಯಲ್ಲಿ ಅವಧಾನದ ಪಾತ್ರ ಹೆಚ್ಚಾಗಿರುತ್ತದೆ. ಆದರೆ ಟಿಪ್ಪಣಿಗಳನ್ನು ತಮ್ಮ ಸ್ವಂತ ವಾಕ್ಯಗಳಲ್ಲಿ ಬರೆಯುವಂತೆ ಸೂಚಿಸಿರುವುದರಿಂದ ಅವರಿಗೆ ಗೊತ್ತಿರುವ ದಿನಬಳಕೆಯ ಪದಗಳನ್ನು ಹೆಚ್ಚಾಗಿ ಬಳಸುತ್ತಾರೆ. ಇದರಿಂದಾಗಿ ಟಿಪ್ಪಣಿ ಬರವಣಿಗೆಯ ಶಬ್ಧಗಳಲ್ಲಿ ತೀರಾ ಕಡಿಮೆ ದೋಷಗಳಾಗಿರುವುದು ತಿಳಿದುಬರುತ್ತದೆ.

ಇಲ್ಲಿ ಉಕ್ತಲೇಖನದ ಶಬ್ದಗಳನ್ನು(A) ಎಂದು, ಉಕ್ತಲೇಖನದ ವಾಕ್ಯಗಳನ್ನು (B) ಎಂದು ಮತ್ತು ಟಿಪ್ಪಣಿಗಳಲ್ಲಿನ ಶಬ್ದಗಳನ್ನು(C) ಎಂದು ಈ ಮೊದಲೇ ತಿಳಿಸಿರುವಂತೆ ಸಂಕೇತಿಸಲಾಗಿದೆ.

ಆದ್ದರಿಂದ ಉಕ್ತಲೇಖನದ ಶಬ್ದಗಳ (A) ವಿವೇಚನೆಯಲ್ಲಿ ಹಳ್ಳಿ ಮತ್ತು ನಗರ ಪ್ರದೇಶದಲ್ಲಿ ಮತ್ತು ವಿದ್ಯಾರ್ಥಿಗಳ ಸ್ವ-ವಿವರದ ಉದ್ದಕ್ಕೂ ಕಂಡುಬಂದಿರುವ ಸರಾಸರಿಯ ಶಬ್ದಗಳ ದೋಷಗಳಲ್ಲಿ, ಹಳ್ಳಿಯ ವಿದ್ಯಾರ್ಥಿಗಳಿಗಿಂತ ನಗರದ ವಿದ್ಯಾರ್ಥಿಗಳು ಹೆಚ್ಚು ಕಾಗುಣಿತ ದೋಷ ಮಾಡಿರುವುದು ತಿಳಿದು ಬರುತ್ತದೆ. ಇದು ನಿರೀಕ್ಷಿತವೂ ಹೌದು. ಏಕೆಂದರೆ, ನಗರ ಪ್ರದೇಶದ ಮಕ್ಕಳಲ್ಲಿ ಇಂಗ್ಲೀಷ್ ಭಾಷೆಯ ಶಬ್ದಗಳ ಬಳಕೆ ಹೆಚ್ಚಾಗಿರಬಹುದಾಗಿದೆ.

ಆದರೆ ಹಳ್ಳಿ ಮತ್ತು ನಗರದ ಒಟ್ಟು ವಿದ್ಯಾರ್ಥಿಗಳು ಉಕ್ತಲೇಖನದ ಶಬ್ದಗಳಲ್ಲಿ ಮಾಡಿರುವ ದೋಷಗಳನ್ನು ಲೆಕ್ಕಹಾಕಿದಾಗ ಅತಿ ಹೆಚ್ಚು ದೋಷಗಳಾಗಿರುವುದು ಕಂಡುಬರುತ್ತದೆ. ಕಾರಣ ಆಯ್ದ ಶಬ್ದಗಳನ್ನು ಉಕ್ತಲೇಖನಕ್ಕಾಗಿ ಬಳಸಿಕೊಂಡಾಗ ವಿದ್ಯಾರ್ಥಿಗಳಿಗೆ ಕೆಲವು ಶಬ್ದಗಳು ಹೊಸದಾಗಿ ಗೋಚರಿಸಬಹುದು. ಇಲ್ಲವೇ ಬರವಣಿಗೆಯ ಸಮಯದಲ್ಲಿ ವಿದ್ಯಾರ್ಥಿಗಳಲ್ಲಿ ಯಾವುದೋ ಒಂದು ಮಾನಸಿಕ ಒತ್ತಡ ಸ್ವಲ್ಪಮಟ್ಟಿಗೆ ಮನೆಮಾಡಿರುವ ಕಾರಣವಿರಬಹುದು.

ಉಕ್ತಲೇಖನದ ವಾಕ್ಯಗಳಲ್ಲಿನ ಪ್ರತಿಶಬ್ದಕ್ಕೆ (B) ಒಬ್ಬ ವಿದ್ಯಾರ್ಥಿ ಮಾಡಿರುವ ಕಾಗುಣಿತದ ಸರಾಸರಿ ದೋಷವು ಶಬ್ದಗಳಲ್ಲಿನ (A) ದೋಷಕ್ಕಿಂತಲೂ ಸ್ವಲ್ಪಕಡಿಮೆ ಪ್ರಮಾಣದಲ್ಲಿ ತಪ್ಪು ಮಾಡಿರುವುದು ತಿಳಿದುಬರುತ್ತದೆ. ಆದರೆ ಈ 'B' ವಿಭಾಗದಲ್ಲಿ ಹಳ್ಳಿ ಮತ್ತು ನಗರ ವಿದ್ಯಾರ್ಥಿಗಳಲ್ಲಿನ ಸರಾಸರಿಯ ಕಾಗುಣಿತ ದೋಷಗಳ ಅಂತರವೂ ಅವರ ಸ್ವ-ವಿವರದ ಉದ್ದಕ್ಕೂ ನಗರ ಪ್ರದೇಶದ ವಿದ್ಯಾರ್ಥಿಗಳ ದೋಷಗಳು ಹೆಚ್ಚಾಗಿರುತ್ತವೆ. ಆದರೆ ಕನ್ನಡ ಮಾಧ್ಯಮದವರ ದೋಷಗಳು ಮಾತ್ರ ವ್ಯತಿರಿಕ್ತವಾಗಿದೆ. ಇಲ್ಲಿ ಮಾಹಿತಿ ಸಂಗ್ರಹದಲ್ಲಿ ವ್ಯಾಪಕತೆ ಇಲ್ಲದ ಕಾರಣ ಖಚಿತವಾದ ನಿಲುವನ್ನು ತಾಳುವುದು ಸಾಧ್ಯವಾಗುತ್ತಿಲ್ಲ.

ಆದರೆ ಉಕ್ತಲೇಖನದ ಶಬ್ದಗಳಿಗಿಂತ (A) ಉಕ್ತಲೇಖನದ ವಾಕ್ಯಗಳಲ್ಲಿ (B) ಹಳ್ಳಿ ಮತ್ತು ನಗರದ ಎಲ್ಲಾ ಮಕ್ಕಳು ಸ್ವಲ್ಪ ಪ್ರಮಾಣದ ಕಡಿಮೆ ತಪ್ಪುಗಳನ್ನು

ಮಾಡುತ್ತಾರೆಂದು ತಿಳಿದು ಬರುವುದು. ಏಕೆಂದರೆ ವಾಕ್ಯಗಳ ಉಕ್ತಲೇಖನದಲ್ಲಿ (B) ಕ್ರಿಯಾಪದಯುಕ್ತವಾದ ಪದಗಳ ಬಳಕೆ ಹೆಚ್ಚಾಗಿರುವವು. ಅವುಗಳು ಇತರೇ ಶಬ್ದಗಳಿಗಿಂತ ತಮ್ಮ ದೈನಂದಿನ ಜೀವನದಲ್ಲಿ ಬಳಕೆಯಾಗುವುದರಿಂದ ವಿದ್ಯಾರ್ಥಿಗಳಲ್ಲಿ ನಿರಾಳವಾಗಿ ಮೂಡಿಬರುತ್ತವೆ ಎಂದು ಹೇಳಬಹುದಲ್ಲದೆ ವಿದ್ಯಾರ್ಥಿಗಳು ಉಕ್ತಲೇಖನದ ವಾಕ್ಯಗಳ ರಚನೆಯಲ್ಲಿ ಅವಧಾನಕ್ಕೆ ಕೇಂದ್ರೀಕೃತವಾದರೂ ಉಕ್ತಲೇಖನದ ನಿರ್ದಿಷ್ಟ ಶಬ್ದಗಳಿಗೆ ನೀಡುವ ಅವಧಾನದ ಅವಶ್ಯಕತೆಗಿಂತ ಸ್ವಲ್ಪ ಕಡಿಮೆಯಾಗಿರಬಹುದಾಗಿದೆ. ಅಲ್ಲದೆ ವಾಕ್ಯಗಳಲ್ಲಿ ಹೆಚ್ಚು ಕ್ರಿಯಾಪದಗಳಿರುವ ಕಾರಣ ವಿದ್ಯಾರ್ಥಿಗಳಿಗೆ ಸ್ವಲ್ಪಸುಲಭವಾಗಿರುತ್ತದೆ.

ಇದಲ್ಲದೇ ವಿದ್ಯಾರ್ಥಿ ವಿವರದ ಹಿನ್ನೆಲೆಯ ದೋಷ ಪ್ರಮಾಣವನ್ನು ವಿವೇಚಿಸಿದಾಗ ಕಾಲಂ AB ಮತ್ತು C ವಿಭಾಗಗಳ ಸಾಮಾಜಿಕ ವಿವರದ ಹಿನ್ನೆಲೆಯಲ್ಲಿ ಲಿಂಗವನ್ನಾಧರಿಸಿದಂತೆ ಗಂಡುಮಕ್ಕಳ ಕಾಗುಣಿತದ ಸರಾಸರಿ ದೋಷವು ಶಬ್ಧಗಳಲ್ಲಿ (A) ವಾಕ್ಯಗಳಲ್ಲಿನ ಪ್ರತಿ ಶಬ್ಧದಲ್ಲಿ (B) ಮತ್ತು ಟಿಪ್ಪಣಿಗಳಲ್ಲಿನ (C) ಶಬ್ಧಗಳ ಸರಾಸರಿಯಿಂದ A ಗಿಂತ B ಯಲ್ಲಿ ಕಡಿಮೆ ದೋಷಗಳಾಗಿವೆ. ಆದರೆ 'C' ಗಳ ಕಾಲಂನಲ್ಲಿ ಶಬ್ಧಗಳ ಸರಾಸರಿ ದೋಷವು ತೀರಾ ಕಡಿಮೆಯಾಗಿದೆ. ಇದರಲ್ಲೂ ಹಳ್ಳಿಯವರಿಗಿಂತ ನಗರ ಶಾಲೆಯ ಮಕ್ಕಳಲ್ಲಿ ದೋಷಪ್ರಮಾಣ ಹೆಚ್ಚಾಗಿದೆ. ಅಲ್ಲದೆ ಹೆಣ್ಣು ಮಕ್ಕಳ ದೋಷಕ್ಕಿಂತ ಗಂಡುಮಕ್ಕಳಲ್ಲಿ ಹೆಚ್ಚು ಕಾಗುಣಿತ ದೋಷಗಳಾಗಿವೆ. ಇದಕ್ಕೆ ಕಾರಣವೇನೆಂದರೆ ಗಂಡುಮಕ್ಕಳು ತಮ್ಮ ಸ್ವಭಾವದಲ್ಲಿ ನಡವಳಿಕೆಯಲ್ಲಿ ಮತ್ತು ಸಾಮಾಜಿಕ ಪರಿಸರದಲ್ಲಿ ಹೆಣ್ಣುಮಕ್ಕಳಿಗಿಂತ ಒರಟಾಗಿರುವುದು ಮತ್ತು ಕಾಗುಣಿತ ದೋಷಗಳಲ್ಲಿ ಗಂಡುಮಕ್ಕಳು ಹೆಚ್ಚು ನಿರ್ಲಕ್ಷ್ಯವನ್ನು ತೋರುತ್ತಾರೆಂದು ಭಾವಿಸಬಹುದು.

ಆದರೆ ಹೆಣ್ಣುಮಕ್ಕಳು ಮಾತ್ರ ಕಾಗುಣಿತ ಬಳಕೆಯ ದೋಷಗಳನ್ನು ಗಂಡು ಮಕ್ಕಳಿಗಿಂತ ಕಡಿಮೆ ಮಾಡುತ್ತಾರೆ. ಇದು ನಿರೀಕ್ಷಿತವೂ ಆಗಿದೆ ಎನ್ನಬಹುದು. ಏಕೆಂದರೆ ಹೆಣ್ಣುಮಕ್ಕಳು ಪ್ರಪಂಚದ ಯಾವುದೇ ಭಾಷೆಯ ಬಳಕೆಯಲ್ಲಿ ಹೆಚ್ಚು ವ್ಯಾಕರಣದ ನಿಯಮಗಳನ್ನು ಪಾಲಿಸುತ್ತಾರೆಂದು ಅರಿಯಲಾಗಿದೆ. ಆದ್ದರಿಂದ ಅವರು ಶಿಷ್ಟಭಾಷೆಯ ಬಳಕೆಯ ಕಡೆ ಹೆಚ್ಚು ಒಲವು ತೋರುತ್ತಾರೆ ಎನ್ನಬಹುದು. ಪರೀಕ್ಷೆಗಳ ಫಲಿತಾಂಶದ ಸರಾಸರಿಯಿಂದ ಹಿಡಿದು ಜೀವನದ ಎಲ್ಲಾ ರಂಗದಲ್ಲೂ ಶಿಷ್ಟಾಚಾರವನ್ನು ಪಾಲಿಸುತ್ತಾರೆ ಎನ್ನಬಹುದು. ಹಾಗಾಗಿ ಗಂಡುಮಕ್ಕಳಿಗಿಂತ ಹೆಣ್ಣು ಮಕ್ಕಳಲ್ಲಿ ಭಾಷೆಯ ಮೇಲಿನ

ಅಭಿಮಾನವೂ ಗಾಢವಾಗಿರುವಂತೆ ಗೋಚರಿಸುತ್ತದೆ. ಆದ್ದರಿಂದ ಭಾಷೆಯ ಬಳಕೆಯಲ್ಲಿ ಸ್ತ್ರೀಯರು ಯಾವುದೋ ಒಂದು ಪರಂಪರೆ ಮತ್ತು ಸುವ್ಯವಸ್ಥೆಯನ್ನು ಕಾಪಾಡಿಕೊಂಡು ಬರುತ್ತಾರೆ ಎಂದು ವ್ಯಾಖ್ಯಾನಿಸಲಾಗಿದೆ. ಅದಕ್ಕಾಗಿ ಹೆಣ್ಣು ಮಕ್ಕಳಲ್ಲಿ ಭಾಷೆಯ ಬಳಕೆಯು ಹೆಚ್ಚು ಶಿಸ್ತು ಬದ್ಧವಾಗಿ ಮೂಡಿಬರುತ್ತದೆ ಎನ್ನಬಹುದು.

ಹಾಗೆಯೇ ವಿದ್ಯಾರ್ಥಿ ವಿವರದ ಮನೆಯ ಭಾಷೆಯ ಹಿನ್ನಲೆಯಲ್ಲಿ ಕನ್ನಡ ಭಾಷೆಯವರಿಗಿಂತ ಇತರೇ ಮಾತೃಭಾಷೆ ಹೊಂದಿರುವ ವಿದ್ಯಾರ್ಥಿಗಳು ಶಬ್ಧಗಳ ಬರವಣಿಗೆಯ A,B ಮತ್ತು C ವಿಭಾಗದಲ್ಲಿ ಹೆಚ್ಚು ತಪ್ಪುಮಾಡಿದ್ದಾರೆ. ಇದು ನಿರೀಕ್ಷಿತವೂ ಹೌದು. ಏಕೆಂದರೆ ಕನ್ನಡವೇ ಮನೆಯ ಭಾಷೆ ಎಂದು ಬಳಸುತ್ತಿರುವವರು ಕನ್ನಡ ಭಾಷೆಯನ್ನು ನಿರರ್ಗಳವಾಗಿ ಅರ್ಥೈಸಿಕೊಳ್ಳುತ್ತಾರೆ. ಆದರೆ ಇತರೇ ಮಾತೃಭಾಷೆಯ ಹಿನ್ನೆಲೆಯಿಂದ ಬಂದವರಿಗೆ ಸ್ವಲ್ಪ ಮಟ್ಟಿಗಾದರೂ ಕಷ್ಟವಾಗುತ್ತದೆ.

ಜಾತಿವಾರು ವಿದ್ಯಾರ್ಥಿಗಳಲ್ಲಿ ಬ್ರಾಹ್ಮಣ ವಿದ್ಯಾರ್ಥಿಗಳು ಕಡಿಮೆ ಕಾಗುಣಿತ ದೋಷಮಾಡಿರುವುದು ತಿಳಿಯುತ್ತದೆ. ಲಿಂಗಾಯಿತ/ಒಕ್ಕಲಿಗ ಜಾತಿಯ ವಿದ್ಯಾರ್ಥಿಗಳು ನಂತರದ ಸ್ಥಾನವನ್ನು ಪಡೆದರೆ, ಇತರೇ ಎಂದು ಪರಿಗಣಿಸಿದ ಕೆಳವರ್ಗದ ಜಾತಿಯ ಮಕ್ಕಳಲ್ಲಿ ಕನ್ನಡದ ಕಾಗುಣಿತ ದೋಷಗಳು ಅತಿ ಹೆಚ್ಚು ಕಂಡುಬರುತ್ತವೆ. ಇದಕ್ಕೆ ಅವರ ಸಾಮಾಜಿಕ ಶೈಕ್ಷಣಿಕ ಮತ್ತು ಆರ್ಥಿಕ ಅನಾನುಕೂಲತೆಗಳೇ ಕಾರಣವಾಗಿರಬಹುದು. ಹೀಗಾಗಿ ಭಾಷೆಯ ಬಳಕೆಯು ಬ್ರಾಹ್ಮಣ, ಲಿಂಗಾಯಿತರು/ಒಕ್ಕಲಿಗ ವಿದ್ಯಾರ್ಥಿಗಳಲ್ಲಿ ಇತರೇಯವರಿಗಿಂತ ಹೆಚ್ಚು ವ್ಯವಸ್ಥಿತವಾಗಿರುತ್ತದೆ ಎನ್ನಬಹುದು. ಅಲ್ಲದೆ ಜಾತಿವಾರು ವಿದ್ಯಾರ್ಥಿಗಳ ಕನ್ನಡದ ಬಳಕೆಯಲ್ಲಿ ಗ್ರಾಮೀಣ ಪ್ರದೇಶದ ಮಕ್ಕಳು ನಗರದವರಿಗಿಂತ ಕಡಿಮೆ ದೋಷಗಳನ್ನು ಮಾಡುತ್ತಾರೆ. ಇದಕ್ಕೆ ಕಾರಣ ಹಳ್ಳಿಯ ಮಕ್ಕಳು ಕನ್ನಡಮಾಧ್ಯಮದಲ್ಲಿಯೇ ಶಿಕ್ಷಣ ಪಡೆಯುತ್ತಿರುವುದು ಮತ್ತು ಅವರ ಸಾಮಾಜಿಕ ವಾತಾವರಣದ ಪ್ರಭಾವವಾಗಿರಬಹುದು. ಆದರೆ ನಗರ ಶಾಲೆಯ ಮಕ್ಕಳು ಇಂಗ್ಲೀಷ್ ಭಾಷಾಕಲಿಕೆಯ ಕಡೆ ಹೆಚ್ಚು ಪ್ರೇರಿತರಾಗುವುದರಿಂದ ಕನ್ನಡದಲ್ಲಿ ಕಾಗುಣಿತ ದೋಷಗಳು ಹೆಚ್ಚಾಗಿ ಕಂಡುಬರುತ್ತವೆ.

ಶೈಕ್ಷಣಿಕವಾಗಿ ಹಳ್ಳಿ ಮತ್ತು ನಗರದ ಪ್ರೌಢಶಾಲೆಗಳಲ್ಲಿ ಕಾಗುಣಿತ ದೋಷವನ್ನು ಕನ್ನಡ ಮಾಧ್ಯಮದ ವಿದ್ಯಾರ್ಥಿಗಳಿಗಿಂತ ಆಂಗ್ಲಮಾಧ್ಯಮದ ವಿದ್ಯಾರ್ಥಿಗಳಲ್ಲಿ ಹೆಚ್ಚು ದೋಷಗಳು ಕಂಡುಬರುವುದು.

ಹಾಗೆಯೇ ತರಗತಿವಾರು ವಿದ್ಯಾರ್ಥಿಗಳಲ್ಲಿ ಈ ದೋಷಗಳ ಪ್ರಮಾಣ ಕಂಡುಕೊಂಡಾಗ ಹಳ್ಳಿಯವರಿಗಿಂತ ನಗರದ ವಿದ್ಯಾರ್ಥಿಗಳೇ ಉಕ್ತಲೇಖನದ ಶಬ್ದಗಳು ವಾಕ್ಯಗಳು ಮತ್ತು ಟಿಪ್ಪಣಿಗಳಲ್ಲಿ ಹೆಚ್ಚು ದೋಷ ಮಾಡುತ್ತಾರೆ. ಆದರೆ ಕೆಲವು ಕಡೆ ಟಿಪ್ಪಣಿಯಲ್ಲಿನ ಬರವಣಿಗೆಯ ದೋಷವು ಇದಕ್ಕೆ ವ್ಯತಿರಿಕ್ತವಾಗಿದೆ. ಆದ್ದರಿಂದ ಇದರ ಬಗ್ಗೆ ಸ್ಪಷ್ಟವಾದ ಕಾರಣಗಳನ್ನು ಕೊಡಲು ಸಾಧ್ಯವಾಗುತ್ತಿಲ್ಲ. ಇದಕ್ಕೆ ಇನ್ನೂ ವ್ಯಾಪಕವಾದ ಮಾಹಿತಿ ಸಂಗ್ರಹಣೆಯ ಅವಶ್ಯಕತೆ ಇದೆ.

ಆರ್ಥಿಕ ಅನುಕೂಲಗಳ ಹಿನ್ನಲೆಯಲ್ಲಿ ಹಳ್ಳಿಗಳಲ್ಲಿ ಮತ್ತು ನಗರದ ಪ್ರೌಢಶಾಲೆಗಳಲ್ಲಿನ ವಿದ್ಯಾರ್ಥಿಗಳ ದೋಷ ಪ್ರಮಾಣದ ಸರಾಸರಿಯಿಂದ ತಿಳಿದು ಬರುವ ಅಂಶವೇನೆಂದರೆ ಆರ್ಥಿಕವಾಗಿ ಅನುಕೂಲತೆಗಳನ್ನು ಪಡೆದವರು ಕನ್ನಡದ ಬಳಕೆಯಲ್ಲಿ ಇತರೇಯವರಿಗಿಂತ ಹೆಚ್ಚು ಸುಧಾರಣೆಯಲ್ಲಿರುವುದು ತಿಳಿದುಬರುತ್ತದೆ.

ಹೀಗೆ ಶಬ್ದಗಳು (A) ವಾಕ್ಯಗಳು (B) ಮತ್ತು ಟಿಪ್ಪಣಿ (C)ಗಳ ವಿಭಾಗದಲ್ಲಿ ಹಳ್ಳಿಯವರಿಗಿಂತ ನಗರ ಶಾಲೆಯ ಮಕ್ಕಳ ಸರಾಸರಿ ದೋಷ ಹೆಚ್ಚಾಗಿ ಕಂಡುಬರುತ್ತದೆ. ಇದರಿಂದ ತಿಳಿದುಬರುವುದೇನೆಂದರೆ, ಖಾಸಗಿ ಶಾಲೆಗಿಂತ ಕನ್ನಡ ಮಾಧ್ಯಮವಿರುವ ಸರ್ಕಾರಿ ಶಾಲೆಗಳಲ್ಲಿ ಕನ್ನಡದ ಕಲಿಕೆ ಉತ್ತಮವಾಗಿರುತ್ತದೆ ಎನ್ನಬಹುದು.

ಈ ರೀತಿಯಾದ ಶಬ್ದಗಳ ದೋಷದ ಹಿಂದೆ ಒಂದು ವ್ಯವಸ್ಥಿತವಾದ ಕ್ರಮ ಇರಬಹುದೆಂದು ಊಹಿಸಲಾಗಿದೆ. ಅಂತಹ ವ್ಯವಸ್ಥಿತ ದೋಷಗಳ ಕ್ರಮವಿದ್ದರೆ ಅದು ಬಹಳ ಪ್ರಾಮುಖ್ಯತೆಯನ್ನು ಪಡೆಯುತ್ತದೆ.

ವಿದ್ಯಾರ್ಥಿಗಳ ಕಾಗುಣಿತ ದೋಷಗಳನ್ನು ವಿವಿಧ ಪ್ರಕಾರಗಳಾದ ಹ್ರಸ್ವಸ್ವರ -ದೀರ್ಘಸ್ವರ, ಅಲ್ಪಪ್ರಾಣ-ಮಹಾಪ್ರಾಣ, ಶ, ಷ, ಸ, 'ಅ'ಕಾರಾದಿ-'ಸ್ವ'ರಾದಿ ಮತ್ತು ಒತ್ತಕ್ಷರಗಳಿಗೆ ಸಂಬಂಧಿಸಿದ ಇತರೇ ದೋಷಗಳ ಹಿನ್ನೆಲೆಯಲ್ಲಿನ ಸಂಖ್ಯಾವಾರು ದೋಷಗಳ ಪ್ರಮಾಣವನ್ನು A B ಮತ್ತು C ವಿಭಾಗಗಳಲ್ಲಿ ಪ್ರತ್ಯೇಕವಾಗಿ ಲೆಕ್ಕಹಾಕಲಾಗಿದೆ. ಇದರಲ್ಲಿ ಹಳ್ಳಿ ಮತ್ತು ನಗರದ ವಿದ್ಯಾರ್ಥಿಗಳ ಸಂಖ್ಯೆ ಸಮವಾಗಿರುವಂತೆ ನೋಡಿಕೊಳ್ಳಲಾಗಿದೆ.

ಆದರೆ ಇವರ ದೋಷಗಳ ಪ್ರಮಾಣದಲ್ಲಿ ನಗರದ ವಿದ್ಯಾರ್ಥಿಗಳೇ ಹೆಚ್ಚಿನ ಸಂಖ್ಯೆಯಲ್ಲಿ ಕಾಗುಣಿತ ದೋಷಗಳನ್ನು ಮಾಡಿದ್ದಾರೆ. ಆದರೆ 'ಅ'ಕಾರಾದಿ-'ಸ್ವ'ರಾದಿಗಳಿಗೆ

ಸಂಬಂಧಿಸಿದ ದೋಷಗಳಲ್ಲಿ ವ್ಯತಿರಿಕ್ತವಾದ ಸಂಗತಿ ತಿಳಿದುಬರುತ್ತದೆ. ಇಲ್ಲಿ ಹಳ್ಳಿಯ ಮಕ್ಕಳು ಹೆಚ್ಚು ತಪ್ಪು ಮಾಡಲು ಕಾರಣವೇನಿರಬಹುದೆಂದು ವಿವೇಚಿಸಿದಾಗ ಹಳ್ಳಿಯವರಲ್ಲಿ ದಿನಬಳಕೆಯ ರೂಢಿಗತವಾಗಿ ಈ ದೋಷಗಳು ಕಂಡುಬರುವುದು ಇಲ್ಲವೇ ಪ್ರಾದೇಶಿಕ ಹಾಗೂ ನಿವೇದಕವನ್ನು ಅವಲಂಬಿಸಿ ಹೆಚ್ಚು ದೋಷಗಳಾಗಬಹುದು.

ಹಾಗೆಯೇ ಅಲ್ಪಪ್ರಾಣ-ಮಹಾಪ್ರಾಣಗಳಲ್ಲಿ ನಗರದ ವಿದ್ಯಾರ್ಥಿಗಳು ಹೆಚ್ಚು ದೋಷಗಳನ್ನು ಮಾಡುವುದಿಲ್ಲ. ಆದರೆ ಹಳ್ಳಿಯ ಪ್ರೌಢಶಾಲೆಯ ಮಕ್ಕಳು ಹೆಚ್ಚು ದೋಷಗಳನ್ನು ಮಾಡಿರುತ್ತಾರೆ. ಇದರ ದೋಷಪ್ರಮಾಣದ ಮೂಲ ಕಾರಣವನ್ನು ಒಂದು ಹಂತದಲ್ಲಿ ವಿವೇಚಿಸಿದಾಗ ನಗರ ಪ್ರದೇಶದ ಮಕ್ಕಳು ವಿವಿಧ ಮಾತೃಭಾಷೆಯ ಹಿನ್ನೆಲೆಯಿಂದ ಬಂದಿರುತ್ತಾರೆ. ಅದರಲ್ಲಿ ಮರಾಠಿ, ತೆಲುಗು, ಉರ್ದು ಇತ್ಯಾದಿಯಾದ ಭಾಷೆಗಳಲ್ಲಿ ಮಹಾಪ್ರಾಣದ ಬಳಕೆ ಇರುವುದರಿಂದ ನಗರ ಪ್ರದೇಶದಲ್ಲಿ ವಿದ್ಯಾರ್ಥಿಗಳ ದೋಷಗಳ ಪ್ರಮಾಣ ಕಡಿಮೆಯಾಗಿ ತೋರುತ್ತಿರಬಹುದು ಎಂದು ಊಹಿಸಲಾಗಿದೆ. ಆದರೆ ಹಳ್ಳಿಯ ಪ್ರೌಢಶಾಲಾ ಮಕ್ಕಳಲ್ಲಿ ಅಲ್ಪಪ್ರಾಣ-ಮಹಾಪ್ರಾಣದಲ್ಲಿನ ದೋಷ ಹೆಚ್ಚಾಗಿರಲು ಕಾರಣ ವಿವೇಚಿಸಿದಾಗ, ಅಲ್ಪಪ್ರಾಣ-ಮಹಾಪ್ರಾಣಗಳ ಬಳಕೆಯಲ್ಲಿ ರೂಢಿಯಿಂದ ಹೆಚ್ಚು ವ್ಯತ್ಯಾಸ ಕಂಡುಕೊಳ್ಳದೇ ಒಂದೇ ರೀತಿಯಾಗಿ ಬಳಸುತ್ತಾರೆಂದು ಭಾವಿಸಲಾಗಿದೆ. ಉದಾ: ಮಹಾಪ್ರಾಣ ಸಹಿತವಾದ 'ಫಲಹಾರಿ' ಎಂದರೆ 'ಹಣ್ಣು ತಿನ್ನುವವ', ಅದನ್ನೇ 'ಪಲಾಹಾರಿ' ಎಂದು ಬಳಸಿದರೆ 'ಮಾಂಸವನ್ನು ತಿನ್ನುವವ' ಎಂದಾಗುತ್ತದೆ. ಹಾಗೆಯೇ 'ಭರ' ಎಂದರೆ 'ಅತಿಶಯ'. ಆದರೆ ಅದನ್ನು 'ಬರ' ಎಂದರೆ 'ಕ್ಷಾಮ' ಎಂದಾಗುತ್ತದೆ. ಇಲ್ಲಿ ಎರಡೂ ಅರ್ಥಗಳಿಗೆ ಒಂದೇ ಪದವನ್ನು ಬಳಸಬಹುದು.

ಹೀಗೆ ದೇಶೀ ಮತ್ತು ಅನ್ಯದೇಶಿಯ ಸ್ವೀಕೃತ ವರ್ಣಗಳ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳ ಕಾಗುಣಿತ ದೋಷಗಳ ಸಂಖ್ಯೆಯನ್ನು ಪರಿಶೀಲಿಸಿದಾಗ ಹ್ರಸ್ವಸ್ವರ-ದೀರ್ಘಸ್ವರದ ದೋಷಗಳ ಸಂಖ್ಯೆ ಮತ್ತು ಇತರೆ ದೇಶೀಯ ವರ್ಣಗಳ ಸಂಖ್ಯೆಗಳಲ್ಲಿನ ದೋಷಪ್ರಮಾಣ ಅತಿ ಹೆಚ್ಚಾಗಿರುವುದು ಕಂಡುಬರುತ್ತದೆ. ಇವು ನಿರೀಕ್ಷೆಗೂ ಮೀರಿ ತಿಳಿದುಬರುವ ದೋಷಗಳಾಗಿವೆ. ಆದರೆ ಕನ್ನಡಕ್ಕೆ ಸ್ವೀಕೃತವಾದ ವರ್ಣಗಳಲ್ಲಿ ತೀರಾ ಕಡಿಮೆ ದೋಷಗಳಾಗಿರುವುದು ತಿಳಿದುಬರುತ್ತದೆ. ಇದರಲ್ಲಿ ಶ, ಷ, ಸ ಗಳಲ್ಲಿ, ಮಹಾಪ್ರಾಣಗಳಲ್ಲಿ ಮತ್ತು ದ್ವಿತ್ವ, ಸಂಯುಕ್ತದ್ವಿತ್ವ, ಒತ್ತಕ್ಷರಗಳಲ್ಲಿ ನಿರೀಕ್ಷಿಸಿದಷ್ಟು

ದೋಷ ಪ್ರಮಾಣ ಕಂಡುಬಂದಿಲ್ಲ. ಆದ್ದರಿಂದ ಶ, ಷ, ಸ ಮತ್ತು ಮಹಾಪ್ರಾಣದ ವರ್ಣಗಳು ವಿದ್ಯಾರ್ಥಿಗಳ ಮನಸ್ಸಿನಲ್ಲಿ ಹೆಚ್ಚು ಸಂದೇಹಗಳಿಲ್ಲದೆ ಸ್ಪಷ್ಟವಾಗಿವೆ ಎಂದು ಭಾವಿಸಬಹುದಾಗಿದೆ.

ಹೀಗೆ ಕಾಗುಣಿತ ದೋಷದ ಬಳಕೆಯಲ್ಲಿ ಉಕ್ತಲೇಖನದ ಶಬ್ಧಗಳು, ಉಕ್ತಲೇಖನದ ವಾಕ್ಯಗಳು ಮತ್ತು ಟಿಪ್ಪಣಿಗಳಲ್ಲಿನ ಶಬ್ಧಗಳನ್ನು ಆಧರಿಸಿದಂತೆ ಹಳ್ಳಿ ಮತ್ತು ನಗರದ ವಿದ್ಯಾರ್ಥಿಗಳಲ್ಲಿ ಕಂಡುಬರುವ ಸಂಖ್ಯೆಗಳಲ್ಲಿನ ದೋಷಗಳ ಸರಾಸರಿಯ ಉದ್ದಕ್ಕೂ ಕ್ರಮವಾಗಿ A,B ಮತ್ತು C ವಿಭಾಗದಲ್ಲಿ ದೋಷಗಳಾಗಿರುತ್ತವೆ. ಕಾರಣ ಉಕ್ತಲೇಖನದ ಶಬ್ಧಗಳು ಮತ್ತು ಉಕ್ತಲೇಖನದ ವಾಕ್ಯಗಳ ಬರವಣಿಗೆಯಲ್ಲಿ ವಿದ್ಯಾರ್ಥಿಗಳು ಮುಕ್ತ ಮನಸ್ಸಿನಿಂದ ಬರೆಯದೇ ಮಾನಸಿಕ ಒತ್ತಡ (Tension) ಕ್ಕೊಳಗಾಗಿ ಹೆಚ್ಚು ದೋಷಗಳನ್ನು ಮಾಡುತ್ತಾರೆಂದು ತಿಳಿಯಬಹುದು.

ಆದರೆ ಟಿಪ್ಪಣಿಗಳಲ್ಲಿ ವಿದ್ಯಾರ್ಥಿಗಳು ತಮ್ಮ ಸ್ವಂತ ಮನಸ್ಸಿನಿಂದ ಆಯ್ದು ವಿಷಯದ ಮೇಲೆ ಬರೆಯುವಂತೆ ಸೂಚಿಸಿದಾಗ ಹೆಚ್ಚು ದೋಷಗಳು ಕಂಡುಬರುವುದಿಲ್ಲ. ಇದಕ್ಕೆ ಕಾರಣ ವಿದ್ಯಾರ್ಥಿಗಳು ತಮ್ಮ ದಿನನಿತ್ಯದಲ್ಲಿ ಬಳಕೆಯಾಗುವ ಶಬ್ಧಗಳನ್ನೇ ಬಳಸಿಕೊಳ್ಳುವುದು ಹೆಚ್ಚಾಗಿ ಕಂಡುಬರುತ್ತದೆ. ಇದರಲ್ಲಿ ಕ್ರಿಯಾಪದದ ಶಬ್ಧಗಳನ್ನು ಹೆಚ್ಚು ಬಳಸುತ್ತಾರೆ. ಉದಾ : ಮಾಡುತ್ತಾನೆ, ಬರುವನು, ಮತ್ತು, ಹೇಳುವರು ಇತ್ಯಾದಿಯಾಗಿರುವುದರಿಂದ ದೋಷಪ್ರಮಾಣ ಟಿಪ್ಪಣಿಯಲ್ಲಿ ಕಡಿಮೆಯಾಗಿದೆ ಎನ್ನಬಹುದು.

ಹೀಗೆ ಪ್ರೌಢಶಾಲಾ ವಿದ್ಯಾರ್ಥಿಗಳ ವ್ಯಾಪಕವಾದ ದೋಷಗಳನ್ನು ಪರಿಶೀಲಿಸಿದಾಗ ಕನ್ನಡದ ಬಳಕೆಯಲ್ಲಿ ಕಾಗುಣಿತ (ಲಿಪಿ) ದೋಷಗಳು ಒಂದು ವ್ಯವಸ್ಥಿತವಾದ ರೀತಿ (Pattern) ಯಲ್ಲಿ ಕಂಡುಬರಬಹುದು. ಅಂತಹ ಅನುಕ್ರಮದ ಲಿಪಿ-ಚಿಹ್ನೆ ದೋಷಗಳ ವ್ಯವಸ್ಥೆ ಇದ್ದರೆ, ಅದು ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತದೆ.

೨. ಕಾಗುಣಿತ ದೋಷಗಳನ್ನು ಕುರಿತ ಸಾರಾಂಶ

ಕನ್ನಡದ ಕಾಗುಣಿತ ದೋಷಗಳನ್ನು ಕುರಿತು ವೈಜ್ಞಾನಿಕವಾಗಿ ಅಧ್ಯಯನ ನಡೆಸಿದ ಭಾಷಾ ತಜ್ಞರಾದ ಡಿ.ಎನ್. ಶಂಕರಭಟ್ಟರು ಕನ್ನಡದಲ್ಲಿ ಕಾಗುಣಿತ ದೋಷಗಳಾಗಲು ಅನ್ಯದೇಶಿಯ ಸ್ವೀಕೃತ ವರ್ಣಗಳಾದ ಶ, ಷ,ಗಳು, ಮಹಾಪ್ರಾಣದ ವರ್ಣಗಳು ಮತ್ತು ಇತರೇ ಸಂಸ್ಕೃತ ವರ್ಣಗಳೇ ಪ್ರಮುಖ ಕಾರಣಗಳಾಗಿವೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

ಆದರೆ ಪ್ರೌಢಶಾಲಾ ಮಕ್ಕಳ ಸಮೀಕ್ಷಾ ವರದಿಯ ಪ್ರಕಾರ ಲೆಕ್ಕಹಾಕಿದ ಸರಾಸರಿಯ ಹಿನ್ನೆಲೆಯಲ್ಲಿ ಅನ್ಯದೇಶಿಯ ಸ್ವೀಕೃತ ವರ್ಣಗಳಾದ ಶ, ಷ, ಸ ಗಳು ಮತ್ತು ಮಹಾಪ್ರಾಣಾಕ್ಷರಗಳ ವಿಷಯದಲ್ಲಿ ಒಟ್ಟು ವಿದ್ಯಾರ್ಥಿಗಳು ಅತೀ ಕಡಿಮೆ ಪ್ರಮಾಣದಲ್ಲಿ ತಪ್ಪುಗಳನ್ನು ಮಾಡಿರುತ್ತಾರೆ. ಬದಲಾಗಿ ದೇಶೀಯ ವರ್ಣಗಳಾದ ಹ್ರಸ್ವಸ್ವರ-ದೀರ್ಘಸ್ವರ, ಒತ್ತಕ್ಷರಗಳಿಗೆ ಸಂಬಂಧಿಸಿದ ಇತರೇ ದೇಶೀಯ ವರ್ಣಗಳ ವಿಷಯದಲ್ಲಿ ನಿರೀಕ್ಷೆಗೂ ಮೀರಿ ಅತಿ ಹೆಚ್ಚು ದೋಷಗಳಾಗಿರುವುದು ತಿಳಿದುಬರುವುದು.

ಆದ್ದರಿಂದ ನಮ್ಮ ಸಮೀಕ್ಷೆಯ ಪ್ರಕಾರ ಡಿ.ಎನ್. ಶಂಕರಭಟ್‌ರವರ ವಾದವನ್ನು ಸಮರ್ಥನೆ ಮಾಡುವುದು ಕಷ್ಟವಾಗಿದೆ. ಆದ್ದರಿಂದ ಕನ್ನಡ ಬರಹಕ್ಕೆ ಸಂಬಂಧಿಸಿದ ಅವರ ಲಿಪಿಕ್ರಾಂತಿಯಲ್ಲಿನ ಸ್ಪಷ್ಟವಾದ ವಿಭಜನೆ ಉತ್ತಮವಾದುದಲ್ಲ ಎಂದು ಭಾವಿಸಲಾಗಿದೆ. ಇದಕ್ಕೆ ಶ್ರೀ ಆರ್. ನರಸಿಂಹಾಚಾರ್ಯರು ಹೇಳಿರುವಂತೆ ''ಸಮರ್ಪಕವಾದ ವರ್ಣಮಾಲೆಯನ್ನು ಇಟ್ಟುಕೊಳ್ಳುವಲ್ಲಿಯೇ ಕನ್ನಡ ಮತ್ತು ತೆಲುಗುಗಳ ಹಿರಿಮೆ ಇದೆ'', ಎಂಬ ಅಭಿಪ್ರಾಯವು ಸಮಾಧಾನಕರವಾಗಿದೆ.

ಗ್ರಂಥಸೂಚಿ

ಗ್ರಂಥಸೂಚಿ

೧. ಡಿ.ಎನ್. ಶಂಕರ್‌ಭಟ್ : ೧. ಕನ್ನಡ ಬರಹವನ್ನು ಸರಿಪಡಿಸು
೨. ಲಿಪಿ ಸುಧಾರಣೆ
೩. ಕನ್ನಡಕ್ಕೆ ಬೇಕು ಕನ್ನಡದೇ ವ್ಯಾಕರಣ

೨. ಡಾ. ಕೆ.ಪಿ. ಭಟ್ : ಅರ್ಥರೇಖೆ
ಕ್ರೈಸ್ಟ್ ಕಾಲೇಜ್ ಕನ್ನಡ ಸಂಘ,
ಪ್ರಕಟಣೆ : ೨೦೦೮

೩. ಅನುಸೂಯಾ ವಿ. ಪರಗಿ : ಮಾತೃಭಾಷೆ ಕನ್ನಡ
ತತ್ವ ಮತ್ತು ಬೋಧನಾ ಮಾರ್ಗ

೪. ಡಾ. ಎಚ್.ಕೆ. ರಾಮನಾಥ್ : ಕನ್ನಡ ಭಾಷೆಯ ಬಳಕೆ

೫. ಡಾ. ಎಂ. ಚಿದಾನಂದ ಮೂರ್ತಿ : ಭಾಷಾ ವಿಜ್ಞಾನದ ಮೂಲ ತತ್ವಗಳು

೬. ಜಿ. ವೆಂಕಟಸುಬ್ಬಯ್ಯ : ಇಗೋ ಕನ್ನಡ

೭. ಡಾ. ಕೆ.ಪಿ.ಭಟ್ ಮತ್ತು ಡಾ. ಸಿ. ನಾಗಭೂಷಣ್ : ಕನ್ನಡ : ರಚನೆ ಮತ್ತು ಬಳಕೆ
ಬೆಂಗಳೂರು ವಿಶ್ವವಿದ್ಯಾಲಯ,
ಪ್ರಕಟಣೆ : ೨೦೦೨

೮. ರಾ.ಯ. ಧಾರವಾಡಕರ್ : ಕನ್ನಡ ಭಾಷಾಶಾಸ್ತ್ರ

೯. ಡಾ. ಸಂಗಮೇಶ ಸವದತ್ತಿಮಠ : ಭಾಷಾ ಲೇಖ

೧೦. ರಾಜಗೋಪಾಲಾಚಾರ್ಯ. ಎಂ : ಶುದ್ಧಾಶುದ್ಧ ಕನ್ನಡ

೧೧. ವೃಷಬೇಂದ್ರಸ್ವಾಮಿ : ಬರೆಯುವ ದಾರಿ

೧೨. ಕೃಷ್ಣಯ್ಯ ಎಂ.ಎಚ್ : ಸಂಕ್ಷಿಪ್ತ ಕನ್ನಡ ಭಾಷೆಯ ಚರಿತ್ರೆ

೧೩. ಪ್ರಸಾರಾಂಗ : ಭಾಷಾ ವಿಶ್ವಕೋಶ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಅನುಬಂಧ

ಅನುಬಂಧ -೧

ವಿದ್ಯಾರ್ಥಿ ಸ್ವ-ವಿವರ

೧. ಹೆಸರು : ....

೨. ಶಾಲೆ : ....

೩. ತರಗತಿ : ....

೪. ಲಿಂಗ (ಗಂಡು/ಹೆಣ್ಣು) : ....

೫. ಶಾಲಾಮಾಧ್ಯಮ (ಕನ್ನಡ/ಆಂಗ್ಲ/ಉರ್ದು) : ....

೬. ಜಾತಿ/ಧರ್ಮ : ....

೭. ಮನೆಯ ಭಾಷೆ : ....

೮. ತಂದೆ/ತಾಯಿಯ ವೃತ್ತಿ : ....

ಅ) ಕಾರು ಇದೆಯಾ? (ಇದೆ / ಇಲ್ಲ)

ಆ) ದ್ವಿಚಕ್ಷ ವಾಹನ ಇದೆಯಾ ? (ಇದೆ/ಇಲ್ಲ)

I ಉಕ್ತಲೇಖನದ- ಶಬ್ಧಗಳು

ನಾನು ಹೇಳುವ ಕೆಲವು ಶಬ್ದಗಳನ್ನು ತಾವುಗಳು ಕ್ರಮವಾಗಿ ಬರೆಯುವುದು. ಅವುಗಳೆಂದರೆ

೧	ದನ	೧೧	ಉಪಾಹಾರ	೨೧	ಹಪ್ಪಳ
೨	ಭಕ್ತ	೧೨	ಸಮಾರಂಭ	೨೨	ಸೇತುವೆ
೩	ಅಕ್ಷರ	೧೩	ಕಥೆ	೨೩	ಹಳ್ಳ
೪	ವಿಷಯ	೧೪	ಹವಾಮಾನ	೨೪	ಥಂಡಿ
೫	ಕಶೇರುಕ	೧೫	ಛತ್ರಿ	೨೫	ಸಂವಿಧಾನ
೬.	ಬಕ್ತಿ	೧೬	ಸರ್ಕಾರ	೨೬	ದರ್ಬಾರು
೭	ಫಲಪುಷ್ಪ	೧೭	ಅಧರ	೨೭	ಹೀಗೆಯೇ
೮	ಧನ	೧೮	ಸ್ವಭಾವ	೨೮	ಯಾರೂ ಇಲ್ಲ
೯	ಲಕ್ಷ	೧೯	ಆಪತ್ತು	೨೯	ವೃಕ್ಷ
೧೦	ಭಾಷಣ	೨೦	ಅಕ್ಕರೆ	೩೦	ಋತು

II ಉಕ್ತಲೇಖನ - ವಾಕ್ಯಗಳು

ನಾನು ಹೇಳುವ ಕೆಲವು ವಾಕ್ಯಗಳನ್ನು ತಾವುಗಳು ಬರೆಯುವುದು

ಮಾನ್ಯಮಂತ್ರಿಗಳು ನಮ್ಮೂರಿನಲ್ಲಿ ನಡೆಯುವ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ, ಭಾಷಣ ಮಾಡಲಿದ್ದಾರೆ.

ಹೋದಲೆಲ್ಲಾ ಆಶ್ವಾಸನೆಗಳನ್ನು ನೀಡುವುದು ತಮ್ಮ ಹಕ್ಕು ಎಂದು ಕೆಲವರು ಭಾವಿಸುತ್ತಾರೆ. ಬಂದ ಅತಿಥಿಗಳಿಗೆ ಫಲಪುಷ್ಪ ನೀಡಿ ಗೌರವಿಸುವುದು ನಮ್ಮ ಸಂಪ್ರದಾಯವಾಗಿದೆ.

ಊಟ-ಉಪಾಹಾರಗಳಿಗೆ ಸಾಕಷ್ಟು ಖರ್ಚು ಮಾಡುವುದು ಅನಿವಾರ್ಯವಾಗುತ್ತದೆ.

ಸರ್ಕಾರವು ವಿದ್ಯಾರ್ಥಿಗಳಿಗಾಗಿ ಹತ್ತು ಹಲವು ಯೋಜನೆಗಳನ್ನು ಹಮ್ಮಿಕೊಂಡಿದೆ. ಗ್ರಾಮಗಳ ಅಭಿವೃದ್ಧಿಗಾಗಿ ಧನಸಹಾಯವನ್ನೂ ಮಾಡುತ್ತಿದೆ. ಆದರೂ ಇನ್ನೂ ಅನೇಕ ವಿಷಯಗಳಲ್ಲಿ ಸುಧಾರಣೆಯಾಗಬೇಕಾಗಿದೆ.

III ಟಿಪ್ಪಣಿ ಬರೆಯಿರಿ

ಹೆಸರು : ....ತರಗತಿ :................

ವಿದ್ಯಾರ್ಥಿಗಳಿಗೆ ಸೂಚನೆ : ಪ್ರೌಢಶಾಲಾ ವಿದ್ಯಾರ್ಥಿಗಳಾದ ತಾವುಗಳು ಈ ಕೆಳಗಿನ ಯಾವುದಾದರೂ ಒಂದು ವಿಷಯಕ್ಕೆ ಸಂಬಂಧಿಸಿದಂತೆ ಅಥವಾ ನಿಮಗೆ ಗೊತ್ತಿರುವ ಯಾವುದೇ ಒಂದು ವಿಷಯದ ಮೇಲೆ ಲಘುಟಿಪ್ಪಣಿ ಬರೆಯಿರಿ.

೧. ನಾ ಮೆಚ್ಚಿದ ಪುಸ್ತಕ
೨. ನನ್ನ ನೆಚ್ಚಿನ ಆಟ
೩. ಕನ್ನಡ ಭಾಷೆ
೪. ನಾ ಮೆಚ್ಚಿದ ಸಾಹಿತಿ
೫. ನಾ ಮೆಚ್ಚಿದ ಸಿನೆಮಾ
೬. ಕಂಪ್ಯೂಟರ್

ಟಿಪ್ಪಣಿ ಬರೆಯುವ ವಿಷಯ :..

ಅನುಬಂಧ - ೨

ಶಾಲಾವಾರು ಸಂದರ್ಶನದ ವಿವರ (೧. ನಗರಪ್ರದೇಶ)

ಕ್ರ. ಸಂ.	ಶಾಲೆಯ ಹೆಸರು ಮತ್ತು ವಿಳಾಸ	ಮುಖ್ಯೋಪಾಧ್ಯಾಯರು ಮತ್ತು ಸಹಶಿಕ್ಷಕರ ಹೆಸರು	ವಿದ್ಯಾರ್ಥಿಗಳ ಹೆಸರುಗಳು			ಪಠ್ಯಕ್ರಮ ಮತ್ತು ಶಾಲೆ
			10ನೇ ತರಗತಿ	9 ನೇ ತರಗತಿ	8 ನೇ ತರಗತಿ	
೧	ಅನಿಕೇತನ ಕಿಶೋರ ಕೇಂದ್ರ ಲಗ್ಗೆರೆ. ನಂ.65 ಲಗ್ಗೆರೆ. ಬೆಂಗಳೂರು ಉತ್ತರ ದೂರವಾಣಿ: 080-28379141	ಶ್ರೀ ರಂಗನಾಥ 9845399303 ಶ್ರೀಮತಿ ಸವಿತಾ 9972002141	1. ಬಂಧನ್.ವಿ. 2. ಸಂಗೀತ ಎಸ್ 3. ಎಂ. ದಿನೇಶ್ 4. ದಾಕ್ಷಾಯಣಿ.ಡಿ	1. ಅಕ್ಷತ.ಎಸ್ 2. ನಾಗರಾಜ.ಜಿ. 3. ಇಂದುಮತಿ.ಡಿ.ಹೆಚ್.	1. ಮಧುಕುಮಾರ್.ಎಲ್ 2. ರೇವತಿ. ಎನ್.ಕೆ. 3. ಗೌರಿ.ಆರ್	ರಾಜ್ಯಪಠ್ಯಕ್ರಮ ಮತ್ತು ಖಾಸಗಿ ಶಾಲೆ
೨	ಎಸ್. ಕಡಾಂಬಿ ವಿದ್ಯಾಕೇಂದ್ರ ಬಸವೇಶ್ವರನಗರ, ಬೆಂಗಳೂರು ದೂರವಾಣಿ: 080-23226019	ಶ್ರೀಮತಿ ಶ್ರೀಧರಿಶೆಣೈ 080-23226019 ಶ್ರೀಮತಿ ರಾಧಾ 080-23239414	1. ಆರ್.ಪಿ. ಪ್ರಿಯಾಂಕ 2. ಅಶೇಷ. ಜಿ. ಭಟ್ಟ 3. ಸುರಾಗ್. ಎಸ್.ಸಾಗರ್	1. ನೇಮಿತ್.ಎಲ್ 2. ನಿವೇದನ. ಎಸ್. 3. ಕೆ. ನಿಶಾಂತ್ 4. ಅಶ್ವಿನ್. ಆರ್	1. ಚಂದನ್ 2. ಅನನ್ಯ.ಎನ್.ರಾವ್ 3. ಆರ್. ಪವನಕುಮಾರ್	I.C.S.E Regional by I.C.S.E, Delhi, ಅನುದಾನಿತ ಶಾಲೆ
೩	ಕೆ.ಎಲ್.ಇ. ಇಂಟರ್‌ನ್ಯಾಷನಲ್ ಸ್ಕೂಲ್, ರಾಜಾಜಿನಗರ ಬೆಂಗಳೂರು-೧೦ ದೂರವಾಣಿ: 080-23429807	ಡಾ. ರತ್ನಾ ದೇಶಪಾಂಡೆ ಮತ್ತು ಶ್ರೀ ಪ್ರಭುದಾಸ್ (ಪಿ.ಟಿ) 9880576838	1. ಅಜಿತ್ 2. ಕಾರ್ತಿಕ್ 3. ಸಂಜಯ	1. ವರುಣ 2. ಮಾನಸಿ 3. ತೇಜಸ್ವಿ	1. ಕಾರ್ತಿಕ್ 2. ಅಮೋಘ 3. ಕಿರಣ	I.C.S.E & ಅನುದಾನಿತ ಶಾಲೆ
೪	ಜನಸೇವಾ ವಿದ್ಯಾಕೇಂದ್ರ ಚೆನ್ನೇನಹಳ್ಳಿ ಬೆಂಗಳೂರು ದಕ್ಷಿಣ-೫೬೨೧೩೦	ಶ್ರೀ ಹೆಚ್.ಎಂ. ಸಿದ್ದಪ್ಪಾ 080-28434230/28434720 ಓಂಕಾರ್ (ಹಿಂದಿ ಸಹಶಿಕ್ಷಕರು) 9242244838	1. ಶರಣ 2. ಭರತ	1. ವಿವೇಕ ಜೆ.ಎಸ್ 2. ಜೈತೀರ್ಥ. ಬಿ	1. ಶ್ರೀಪಾದ 2. ನವೀನಕುಮಾರ 3. ಆಕಾಶ. ಎ.ಎಂ. 4. ಅತುಲ್ ಕಶ್ಯಪ.ಟಿ. 5. ಅರ್ಪಣ. ಕೆ. 6. ಹೇಮಾ. ಸಿ.ವಿ.	ವಸತಿ ಶಾಲೆ

ಕ್ರ. ಸಂ.	ಶಾಲೆಯ ಹೆಸರು ಮತ್ತು ವಿಳಾಸ	ಮುಖ್ಯೋಪಾಧ್ಯಾಯರು ಮತ್ತು ಸಹಶಿಕ್ಷಕರ ಹೆಸರು	ವಿದ್ಯಾರ್ಥಿಗಳ ಹೆಸರುಗಳು			ಪಠ್ಯಕ್ರಮ ಮತ್ತು ಶಾಲೆ
			10ನೇ ತರಗತಿ	9 ನೇ ತರಗತಿ	8 ನೇ ತರಗತಿ	
೫	ಶ್ರೀ ರಾಜರಾಜೇಶ್ವರಿ ವಿದ್ಯಾಶಾಲೆ ಕೆಂಚೆನಹಳ್ಳಿ,ರಾಜರಾಜೇಶ್ವರಿ-ನಗರ, ಬೆಂಗಳೂರು ನಗರ-98	ಶ್ರೀ ಗೋಪಾಲನ್ 080-28601855 ಶ್ರೀ ರವಿಶಂಕರ್	1. ಬಾಲಾಜಿ 2, ಸಿ. ವಿವೇಕ 3. ಕವಿತಾಬಾಯಿ 4. ಅಲಮೇಲಮ್ಮ	1. ಶ್ರೀಕಾಂತ 2. ಬಾಪುರಾವ್.ಡಿ. 3. ಮಂಜುಳಾ	1. ಬಿ.ಆರ್. ಮಂಜುನಾಥ 2. ಪಿ. ಮಲ್ಲೇಶ್ 3. ಟಿ.ಎಂ.ಕಾವ್ಯ	ರಾಜ್ಯ ಪಠ್ಯಕ್ರಮ ಅನುದಾನಿತ ಕರ್ನಾಟಕ ಸರ್ಕಾರ
೬.	ಆಡನ್ ಶಾಲೆ ಹೊಸಕೆರೆಹಳ್ಳಿ ಕ್ರಾಸ್ ಬನಶಂಕರಿ 3ನೇ ಹಂತ ಬೆಂಗಳೂರು-560085	ಶ್ರೀಧರರಾವ್ 080-26722888 ಶ್ರೀಮತಿ ಪದ್ಮ 9242124051	1. ವಿಘ್ನೇಶ್ 2. ಅನುಷಾ 3. ಚಂದನ 4. ಪ್ರಜ್ವಲ್	1. ಪ್ರಿಯಂವದಾ 2. ಕೆ.ಎಂ. ಮನು	1. ವಿಪುಲಾ 2. ಧೀರಜ್ 3. ಕುಶಾಲ್ 4. ವಿಶ್ವಾಸ್	ರಾಜ್ಯ ಪಠ್ಯಕ್ರಮ ಖಾಸಗಿ ಶಾಲೆ
೭.	ಬಾಪೂಜಿ ಮೆಮೋರಿಯಲ್ ಆಂಗ್ಲಶಾಲೆ ಮಾಗಡಿ ರಸ್ತೆ ಬೆಂಗಳೂರು	ಶ್ರೀ ಈಶ್ವರಪ್ಪ. ಸಿ.ವಿ. 9880454829 ಶ್ರೀ ಚಂದ್ರಶೇಖರ್ 9945445045	1. ನಯನಾ. ಎ. 2. ಮಂಜುಳಾ. ಎ. 3. ಸಬಿರಾ ಬೇಗಂ 4. ಮೊಹಮ್ಮದ್ ಅಕ್ಬರ್	1. ವರ್ಷಿತಾ 2. ಸಬೀಹ ಬೇಗಂ. ಕೆ. 3. ಅರುಣ.ಎಸ್	1. ದಸ್ತಗೀರ್ 2. ಮಹ್ಮದ್ ನದೀನ್ 3. ನಗ್ಮ ಖಾಸಿಂ	ರಾಜ್ಯಪಠ್ಯ ಖಾಸಗಿ ಶಾಲೆ
೮.	ರೇಣುಕಾ ಪ್ರೌಢಶಾಲೆ ಪ್ರಕಾಶನಗರ ಬೆಂಗಳೂರು-21	ಶ್ರೀಮತಿ ನಂದಿನಿ 99009122831 ಶ್ರೀಮತಿ ಸುಜಾತ 9341966686	1. ಜ್ಯೋತಿ 2. ಹೇಮಂತ 3. ಕುಮಾರೇಶ 4. ಮೋಹನ್. ಎನ್.ಆರ್	1. ಪ್ರೀತಮ್ 2. ಗುರುರಾಜ್ 3. ಐಯ್ಯಪ್ಪ	1. ರಾಧ 2. ಲಕ್ಷ್ಮೀಕಾಂತ್ 3. ನರಸಿಂಹಮೂರ್ತಿ	ರಾಜ್ಯಪಠ್ಯ ಅನುದಾನಿತ ಶಾಲೆ

೨. ಗ್ರಾಮೀಣ ಶಾಲಾ ಸಂದರ್ಶನದ ವಿವರ

ಕ್ರ. ಸಂ.	ಶಾಲೆಯ ಹೆಸರು ಮತ್ತು ವಿಳಾಸ	ಮುಖ್ಯೋಪಾಧ್ಯಾಯರು ಮತ್ತು ಸಹಶಿಕ್ಷಕರ ಹೆಸರು	ವಿದ್ಯಾರ್ಥಿಗಳ ಹೆಸರುಗಳು			ಪಠ್ಯಕ್ರಮ ಮತ್ತು ಶಾಲೆ
			10ನೇ ತರಗತಿ	9 ನೇ ತರಗತಿ	8 ನೇ ತರಗತಿ	
೧	ಸರ್ಕಾರಿ ಪ್ರೌಢಶಾಲೆ ಅಚ್ಚಲು, ಕನಕಪುರ ತಾ॥. ರಾಮನಗರ	ಶ್ರಿ ಸೈಯದ್ ಅಹ್ಮದ್ ಶ್ರೀಮತಿ ಲಲಿತಮ್ಮ ಶ್ರೀ ನಾಗರಾಜ	1. ನಾರಾಯಣ ಸಿ.ಕೆ. 2. ರತ್ನಮ್ಮ 3. ಶಿವಶಂಕರ	1. ಮಧು. 2. ದೀಪಕ 3. ರಕ್ಷಿತಾ	1. ಪುಷ್ಪಲತ 2. ಜ್ಯೋತಿ. ಹೆಚ್.ಪಿ. 3. ಕೃಷ್ಣಮೂರ್ತಿ	ರಾಜ್ಯಪಠ್ಯ ಸರ್ಕಾರಿ ಶಾಲೆ
೨.	ಗ್ರಾಮಾಂತರ ಪ್ರೌಢಶಾಲೆ ಸಾತನೂರು ತಾ. ಕನಕಪುರ ರಾಮನಗರ ಜಿಲ್ಲೆ	ಶ್ರೀಮತಿ ಹೇಮಲತ 7551206 ಶ್ರೀ ಪ್ರಸಾದ 9886384359 ಶ್ರೀ ಟಿ. ಗುರುಮೂರ್ತಿ	1. ದಿಲೀಪ. ಎಸ್ 2. ಶೃತಿ. ಬಿ. 3. ನಾರಾಯಣ 4. ಪ್ರಿಯಾಂಕ	1. ಯೋಗೇಶ 2. ಭಾಗ್ಯ 3. ರಾಜೇಶ	1. ರೋಜಾ 2. ರುದ್ರಸ್ವಾಮಿ 3. ಮಧುಶ್ರೀ	ರಾಜ್ಯಪಠ್ಯ ಅನುದಾನಿತ ಶಾಲೆ
೩.	ಸರ್ಕಾರಿ ಪ್ರೌಢಶಾಲೆ ಜಾಲಮಂಗಲ ರಾಮನಗರ ತಾ. ರಾಮನಗರ ಜಿಲ್ಲೆ	ಶ್ರೀಮತಿ ಬಿ.ಎಲ್. ಸರೋಜಮ್ಮ 080-7247205 ಶ್ರೀ ಬಾಬರ್, ಕೋಡ್ಲಿ 9845254465	1. ರೇಖಾ. ಜೆ.ಡಿ. 2. ಚಂದ್ರಶೇಖರ.ಟಿ.ವಿ. 3. ಸುನಿತಾ. ಟಿ.ಎಸ್	1. ಸುಮಲತಾ.ಜಿ. 2. ಸೋನಿಯಾ ಕೌಸರ 3. ರಘು. ಟಿ.	1. ರಂಜಿತಾ.ಜೆ.ಎನ್. 2. ರಂಜಿತ್. ಡಿ.ಸಿ. 3. ಸಂದೀಪ್. ಎಸ್.	ರಾಜ್ಯಪಠ್ಯ ಸರ್ಕಾರಿ ಶಾಲೆ
೪.	ಸರ್ಕಾರಿ ಪ್ರೌಢಶಾಲೆ ಮಾಯಿಗಾನಹಳ್ಳಿ ರಾಮನಗರ ತಾ. ರಾಮನಗರ ಜಿಲ್ಲೆ	ಶ್ರೀ ಬಸವರಾಜು 998647946 ಶ್ರೀ ರೇವಣಪ್ಪ. ಎ.ಎಸ್ 9008723020	1. ರೋಜಾ. ಬಿ. 2. ಶೃತಿ. ಆರ್ 3. ಅಭಿಷೇಕ್. ಕೆ.ಎ. 4. ಬಾಲರಾಜ್	1. ಸಿದ್ದೇಗೌಡ 2. ರೇಖಾ. ಕೆ.ಎಸ್ 3. ಸುಷ್ಮಾ. ಜಿ.ಎಸ್.	1. ಅಜಯ್.ಬಿ.ಎನ್. 2. ಕಾರ್ತಿಕ್ 3. ಅಭಿಷರೇಕ್. ಡಿ. 4. ಶಶಿಕುಮಾರ. ಆರ್	ರಾಜ್ಯಪಠ್ಯ ಸರ್ಕಾರಿ ಶಾಲೆ

ಕ್ರ. ಸಂ.	ಶಾಲೆಯ ಹೆಸರು ಮತ್ತು ವಿಳಾಸ	ಮುಖ್ಯೋಪಾಧ್ಯಾಯರು ಮತ್ತು ಸಹಶಿಕ್ಷಕರ ಹೆಸರು	ವಿದ್ಯಾರ್ಥಿಗಳ ಹೆಸರುಗಳು			ಪಠ್ಯಕ್ರಮ ಮತ್ತು ಶಾಲೆ
			10ನೇ ತರಗತಿ	9 ನೇ ತರಗತಿ	8 ನೇ ತರಗತಿ	
೫	ಸರ್ಕಾರಿ ಪ್ರೌಢಶಾಲೆ ಗಿಳಲಗುಂಡಿ ಸಾಗರ ತಾ॥ ಶಿವಮೊಗ್ಗ ಜಿಲ್ಲೆ	ಶ್ರೀ ತಿಮ್ಮಪ್ಪ. ಡಿ. 9449782979 ಶ್ರೀ ಮಂಜುನಾಥ.ಬಿ.ಕೆ 9988477023	1. ಸಂಜಯ್‌ರಾಜ್ 2. ಸುಧಾ 3. ಶಂಶಿರಾಬಾನು 4. ಸುನೀತ	1. ಸುಮಯ್ಯಭಾನು 2. ಲಿಂಗರಾಜು 3. ಸಂತೋಷ್	1. ಎಜಾಜ್‌ವುಲ್ಲಾ 2. ಮಣಿಶಂಕರ 3. ಕಮಾಲಾಕ್ಷ	ರಾಜ್ಯಪಠ್ಯ ಸರ್ಕಾರಿ ಶಾಲೆ
೬	ಸರ್ಕಾರಿ ಪ್ರೌಢಶಾಲೆ ಅರುಳಾಳು ಸಂದ್ರ ಚನ್ನಪಟ್ಟಣ ತಾ. ರಾಮನಗರ ಜಿಲ್ಲೆ	ಶ್ರೀ ಶಿವಸ್ವಾಮಿ 9964182372	1. ಸುನೀಲ್.ಆರ್. 2. ರಾಜಾಚಾರ್ಯ 3. ಯೋಗೀಶ ಕುಮಾರ್ 4. ಕೃಷ್ಣ. ಕೆ.ವಿ.	1. ಸುನೀಲ್ ಎಂ.ಎಸ್ 2. ಶ್ರೀನಿವಾಸ. ಪಿ. 3. ಚಂದನ್.ಪಿ. 4. ಸುಶ್ಮಿತ. ವಿ.ಜಿ.	1. ಶಿಲ್ಪ. ಎಸ್ 2. ಗುರುರಾಜ್. ಎಂ. 3. ವರುಣ್‌ಕುಮಾರ್	ರಾಜ್ಯಪಠ್ಯ ಸರ್ಕಾರಿ ಶಾಲೆ ಗ್ರಾಮೀಣ ವಲಯ
೭.	ಸರ್ಕಾರಿ ಪ್ರೌಢಶಾಲೆ ಯಂಟಗಾನಹಳ್ಳಿ ನೆಲಮಂಗಲ ತಾ. ಬೆಂಗಳೂರು ಜಿಲ್ಲೆ	ಶ್ರೀ ಡಿ. ಶ್ರೀನಿವಾಸಯ್ಯ. K.E.S 9980742434 ಶ್ರೀ ಮಂಜಪ್ಪಾ.ಎಸ್ 9343226721	1. ಮಂಜುನಾಥ.ಜಿ.ಎಸ್ 2. ಆಂಜನಮೂರ್ತಿ. ಜಿ. 3. ಮಮತಾ ಬ್ಯಾನರ್ಜಿ	1. ದಯಾಶ್ರೀ 2. ಮಾರುತಿ 3. ಡಿ.ಆರ್. ಹೇಮಂತ 4. ಲಕ್ಷ್ಮೀ. ಎಂ.	1. ಸುರೇಶ್.ಎ.ಆರ್. 2. ಆಶಾ. ಸಿ. 3. ಪವಿತ್ರಾ. ಆರ್ 4. ದೇವರಾಜು.ಎಸ್	ರಾಜ್ಯಪಠ್ಯ ಗ್ರಾಮೀಣ ವಲಯ
೮.	ಸರ್ಕಾರಿ ಪ್ರೌಢಶಾಲೆ ಸೋಲದೇವನಹಳ್ಳಿ ನೆಲಮಂಗಲ ತಾ. ಬೆಂಗಳೂರು ಜಿಲ್ಲೆ	ಶ್ರೀ ಟಿ. ತಿಪ್ಪೇಚಿತ್ತಣ್ಣ 9945471703 ಶ್ರೀ ಬಿ.ಆರ್. ಲೋಕೇಶ 9449485535	1. ದೀಪುಲಿಬಾಯಿ ಎಲ್ 2. ಸುಮಲತ. ಆರ್ 3. ವಿಜಯಾ ವಿ. 4. ರವಿಚಂದ್ರ. ಜಿ.ಎಂ. 5. ನಟರಾಜು. ಎನ್.	1. ಆಶಾ. ಕೆ.ಬಿ. 2. ಕವಿತಾ. ಟಿ. 3. ಹರ್ಷ. ಬಿ.ಜೆ.	1. ಗೀತಾ ಎಸ್. 2. ಅಂಬುಜಾ. ಕೆ 3. ಚೇತನಕುಮಾರನಾಯ್ಕ	ರಾಜ್ಯಪಠ್ಯಾ ಗ್ರಾಮೀಣವಲಯ

ಅನುಬಂಧ -೩

ಶಾಲಾ ಮುಖ್ಯೋಪಾಧ್ಯಾಯರಿಗೆ ಕೊಡುವ ವಿನಂತಿ ಪತ್ರದ ಮಾದರಿ

ಇಂದ

ಸಿದ್ಧಲಿಂಗಪ್ಪ.ಎಸ್. ದೇಶಮುಖ್
ನಂ. ೫೩೩, ಪಶ್ಚಿಮಕಾರ್ಡ್ ರಸ್ತೆ
೩ನೇ ಹಂತ, ೧ನೇ ಬ್ಲಾಕ್, ೧೫ನೇ ಮುಖ್ಯರಸ್ತೆ
ಮಂಜುನಾಥ ನಗರ, ಬೆಂಗಳೂರು-೧೦
ಮೊಬೈಲ್ ಸಂಖ್ಯೆ: 9731167626

ಇವರಿಗೆ

ಆದರಣೀಯ ಮುಖ್ಯೋಪಾಧ್ಯಾಯರಿಗೆ,

ವಿಷಯ : ಎಂ.ಫಿಲ್. ಸಂಪ್ರಬಂಧಕ್ಕೆ ತಮ್ಮ ವಿದ್ಯಾರ್ಥಿ ಸಂದರ್ಶನದ ಅನುಮೋದನೆ ಕುರಿತು

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಸಿದ್ಧಲಿಂಗಪ್ಪ ಶಿವಪುತ್ರಪ್ಪ ದೇಶಮುಖ್ ಆದ ನಾನು ಪ್ರಸಕ್ತ ೨೦೦೮ನೇ ಸಾಲಿನಲ್ಲಿ ಹಂಪಿ ವಿಶ್ವವಿದ್ಯಾನಿಲಯದಡಿಯಲ್ಲಿ ಎಂ.ಫಿಲ್. ಅಧ್ಯಯನಕ್ಕಾಗಿ ನಾನು ಆರಿಸಿಕೊಂಡ ಸಂಪ್ರಬಂಧದ ವಿಷಯವು **''ಪ್ರೌಢಶಾಲಾ ಮಕ್ಕಳ ಕನ್ನಡದ ಬಳಕೆಯಲ್ಲಿ ಕಾಗುಣಿತ ದೋಷಗಳು''** ಎಂಬುದಾಗಿದ್ದು, ಈ ನನ್ನ ಸಂಪ್ರಬಂಧದ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮ ಪ್ರೌಢಶಾಲೆಯ ಮಕ್ಕಳ ಸಂದರ್ಶನ ಮಾಡಲು ತಾವುಗಳು ಸಂಬಂಧಪಟ್ಟ ಸಹ ಶಿಕ್ಷಕರುಗಳೊಂದಿಗೆ ನನಗೆ ಅನುಮತಿ ನೀಡಬೇಕಾಗಿ ವಿನಂತಿಸಿಕೊಳ್ಳುತ್ತೇನೆ.

ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ ಬಿ.ಎಂ.ಶ್ರೀ ಪ್ರತಿಷ್ಠಾನ ಅಧ್ಯಯನ ಸಂಸ್ಥೆಯ ಅನುಮೋದನೆಯ ಪತ್ರವನ್ನು ಇದರ ಜೊತೆಗೆ ಲಗತ್ತಿಸಲಾಗಿದೆ.

ಧನ್ಯವಾದಗಳೊಂದಿಗೆ,

ತಮ್ಮ ವಿಶ್ವಾಸಿ

ದಿನಾಂಕ :
ಸ್ಥಳ

(ಸಿದ್ಧಲಿಂಗಪ್ಪ. ಎಸ್. ದೇಶಮುಖ್)
ಸಂಶೋಧನಾ ವಿದ್ಯಾರ್ಥಿ

ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ
ಬಿ.ಎಂ.ಶ್ರೀ ಕಲಾಭವನ (ರಿ.)
೩ನೇ ಮುಖ್ಯರಸ್ತೆ, ನರಸಿಂಹರಾಜ ಕಾಲೋನಿ, ಬೆಂಗಳೂರು-೧೯
ದೂರವಾಣಿ : ೨೬೬೧೫೮೭೭. ಇ-ಮೇಲ್: bms/trust@yahoo.com

ಶ್ರೀ ಪ್ರ.1361/08
ದಿನಾಂಕ : 23-7-08

ಸಂಬಂಧಪಟ್ಟವರಿಗೆ

ಮುಖ್ಯೋಪಾಧ್ಯಾಯರು
ಸರ್ಕಾರಿ/ಅನುದಾನಿತ/ಖಾಸಗಿ ಪ್ರೌಢಶಾಲೆಗಳು
ನಗರ/ಗ್ರಾಮೀಣವಲಯ

ಹಂಪಿ ಕನ್ನಡ ವಿಶ್ವವಿದ್ಯಾನಿಲಯದಿಂದ ಅನುಮತಿ ಪಡೆದು ಸಂಶೋಧನಾ ವಿದ್ಯಾರ್ಥಿಗಳಿಗಾಗಿ ಈ ನಮ್ಮ ಸಂಸ್ಥೆಯಾದ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಎಂ.ವಿ.ಸೀ. ಸಂಶೋಧನಾ ಕೇಂದ್ರದಲ್ಲಿ ಪ್ರಸಕ್ತ ೨೦೦೮ನೇ ಸಾಲಿಗೆ ಎಂ.ಫಿಲ್. ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಯಾದ **ಶ್ರೀ ಸಿದ್ಧಲಿಂಗಪ್ಪ ಶಿವಪುತ್ರಪ್ಪಾ ದೇಶಮುಖ್** ಇವರು **ಡಾ. ಕೆ.ಪಿ.ಭಟ್** ಅವರ ಮಾರ್ಗದರ್ಶನದಲ್ಲಿ **''ಪ್ರೌಢಶಾಲಾ ಮಕ್ಕಳ ಕನ್ನಡದ ಬಳಕೆಯಲ್ಲಿ ಕಾಗುಣಿತ ದೋಷಗಳು''** ಎಂಬ ಸಂಶೋಧನಾ ಸಂಪ್ರಬಂಧದ ವಿಷಯಕ್ಕಾಗಿ ವಿವಿಧ ಪ್ರೌಢಶಾಲೆಗಳ ಮಕ್ಕಳನ್ನು ಸಂದರ್ಶಿಸಿ ಮಾಹಿತಿಯನ್ನು ಪಡೆಯಬೇಕಾಗಿರುವುದರಿಂದ ಇವರಿಗೆ ತಮ್ಮ ಪ್ರೌಢಶಾಲಾ ಮಕ್ಕಳ ಸಂದರ್ಶನಕ್ಕೆ ಅನುಮತಿ ನೀಡಲು ಕೋರಿದೆ.

(ಡಾ. ನಾ. ಗೀತಾಚಾರ್ಯ)
ನಿರ್ದೇಶಕರು
ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನಾ ಕೇಂದ್ರ